# ಅಧ್ಯಾಯ–I

# ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

# ಅಧ್ಯಾಯ – I

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

### ಪೀಠಿಕೆ

**1.1.** ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತವೆ. ರಾಜ್ಯದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಲು ಅಗತ್ಯವಿರುವ ಒಂದು ನಿರ್ಣಾಯಕ ಮೂಲಸೌಕರ್ಯವನ್ನು ಒದಗಿಸುವುದಲ್ಲದೆಯೇ, ಈ ವಲಯವು ರಾಜ್ಯದ ಒಟ್ಟು ದೇಶೀಯ ಉತ್ಪಾದನೆಗೆ (ಜಿಡಿಪಿ) ಗಮನಾರ್ಹ ಕೊಡುಗೆಗಳನ್ನು ನೀಡುತ್ತದೆ. ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಹಾಗೂ ರಾಜ್ಯದ ಒಟ್ಟು ದೇಶೀಯ ಉತ್ಪದನೆಯ ಅನುಪಾತವು ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಚಟುವಟಿಕೆಗಳ ವಿಸ್ತಾರವನ್ನು ತೋರಿಸುತ್ತದೆ. ಮಾರ್ಚ್ 2019ಕ್ಕೆ ಅಂತ್ಯಗೊಂಡ ಕಳೆದ ಐದು ಸಾಲುಗಳ ಒಂದು ಅವಧಿಗೆ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಹಾಗೂ ರಾಜ್ಯದ ಒಟ್ಟು ದೇಶೀಯ ಉತ್ಪಾದನೆಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ಒದಗಿಸುತ್ತದೆ:

**ಕೋಷ್ಟಕ ಸಂಖ್ಯೆ 1.1: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು ಹಾಗೂ ಅದಕ್ಕೆ ಪರಸ್ಪರ ಅಭಿಮುಖವಾಗಿ ರಾಜ್ಯದ ಒಟ್ಟು ದೇಶೀಯ ಉತ್ಪಾದನೆಯ ವಿವರಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು | 34,887.37 | 38,372.81 | 41,284.65 | 46,311.34 | 50,719.75 |
| 2 | ರಾಜ್ಯದ ಒಟ್ಟು ದೇಶೀಯ ಉತ್ಪಾದನೆ | 9,13,923.00 | 10,45,182.00 | 11,55,912.00 | 13,25,443.00 | 14,08,112.00 |
| 3 | ರಾಜ್ಯದ ಒಟ್ಟು ದೇಶೀಯ ಉತ್ಪಾದನೆಗೆ ಹೋಲಿಸಿದಂತೆ ಶೇಕಡಾವಾರು ವಹಿವಾಟು | 3.82 | 3.67 | 3.57 | 3.49 | 3.60 |

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟು 2014–15ರಿಂದ 2018–19ರ ಅವಧಿಯಲ್ಲಿ ಶೇಕಡಾ 7.59ರಿಂದ ಶೇಕಡಾ 12.18ರವರೆಗೆ ಅವಿರತ ಹೆಚ್ಚಳವನ್ನು ದಾಖಲಿಸಿತಾದಲ್ಲಿ, ರಾಜ್ಯದ ಜಿಡಿಪಿಯು ಅದೇ ಅವಧಿಯಲ್ಲಿ ಶೇಕಡಾ 6.24ರಿಂದ ಶೇಕಡಾ 14.67ರವರೆಗಿನ ಹೆಚ್ಚಳವನ್ನು ದಾಖಲಿಸಿತ್ತು. ಕಳೆದ ಐದು ವರ್ಷಗಳಲ್ಲಿ ರಾಜ್ಯದ ಜಿಡಿಪಿಯ ಶೇಕಡಾ 11.41[8] ಪ್ರತಿಯಾಗಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟಿನ ಸಂಯೋಜಿತ ವಾರ್ಷಿಕ ಬೆಳವಣಿಗೆಯು ಶೇಕಡಾ 9.81ರಷ್ಟನ್ನು[9] ದಾಖಲಿಸಿತ್ತು. ಇದು ರಾಜ್ಯದ ಒಟ್ಟು ದೇಶೀಯ ಉತ್ಪಾದನೆಗೆ ಹೋಲಿಸಿದಂತೆ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟಿನ ಪಾಲಿನಲ್ಲಿ 2014–15ರಲ್ಲಿದ್ದಂತಹ ಶೇಕಡಾ 3.82ರಿಂದ 2018–19ರಲ್ಲಿ ಶೇಕಡಾ 3.60ಕ್ಕೆ ಇಳಿಮುಖಗೊಳ್ಳುವಲ್ಲಿ ಪರಿಣಮಿಸಿತ್ತು.

[8] ಈ ರೀತಿ ಲೆಕ್ಕಹಾಕಲಾಯಿತು: $[1(14,08,112/9,13,923)^{1/1\times4} - 1] \times 100$ ($r=n[(A/P)^{1/nt}-1]$ ಇದರಲ್ಲಿ r=ಬಡ್ಡಿಯ ದರ, n= ಸಂಯೋಜನಾ ಷರತ್ತು, A= ಅಸಲಿಗೆ ಬಡ್ಡಿ ಸೇರಿಸಿರುವುದು, P= ಅಸಲು ಹಾಗೂ t=ಸಂಯೋಜನಾ ಅವಧಿ).

[9] ಈ ರೀತಿ ಲೆಕ್ಕಹಾಕಲಾಯಿತು: $[1(50,719.75/34,887.37)^{1/1\times4} - 1] \times 100$.

**ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ರಚನೆ**

**1.2.** ಈ ಹಿಂದಿನ ಮೈಸೂರು ರಾಜ್ಯದ ವಿದ್ಯುತ್ ಇಲಾಖೆಯ ನಿಯಂತ್ರಣದಲ್ಲಿದ್ದಂತಹ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆ, ಪ್ರಸರಣ ಹಾಗೂ ವಿತರಣೆಯ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ವಿದ್ಯುತ್ ಮಂಡಳಿಗೆ (ಕೆಇಬಿ) 1 ಅಕ್ಟೋಬರ್ 1957ರಿಂದ ಜಾರಿಗೆ ಬಂದಂತೆ ಅದರ ರಚನೆಯ ನಂತರ ವರ್ಗಾಯಿಸಲಾಗಿತ್ತು. ರಾಜ್ಯ ಸರ್ಕಾರದ ಸಂಪೂರ್ಣ ಮಾಲಿಕತ್ವದೊಂದಿಗೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಾಗಿ ಜುಲೈ 1970ರಲ್ಲಿ ಅಸ್ತಿತ್ವಕ್ಕೆ ಬಂದಂತಹ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಅದರ ಜಲೀಯ, ಶಾಖೋತ್ಪನ್ನ ಹಾಗೂ ನವೀಕರಿಸಬಹುದಾದ ಇಂಧನ ಸ್ಟೇಷನ್ನುಗಳ ಮೂಲಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮುಖ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಮತ್ತು ಇಂಧನ ಉಳಿತಾಯ/ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ಸಲುವಾಗಿಯೇ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆಆರ್‌ಇಡಿಎಲ್) ಎಂಬುದಾಗಿ ಕರೆಯಲ್ಪಡುವ ಒಂದು ಪ್ರತ್ಯೇಕ ಸಂಸ್ಥೆಯನ್ನು ರಚಿಸಲು ಕ್ರಮವನ್ನು ಕೈಗೊಂಡಿತು (1995).

ತದನಂತರ ಜನವರಿ 1997ರಲ್ಲಿ ಒಂದು ಸ್ವತಂತ್ರ ನಿಯಂತ್ರಕ ಆಯೋಗದ ಸ್ಥಾಪನೆಯನ್ನು ಚಿಂತಿಸಿದ್ದಂತಹ ವಿದ್ಯುತ್ ಸುಧಾರಣೆಗಳ ಮೇಲಿನ ತನ್ನ ಸಾಮಾನ್ಯ ಕಾರ್ಯನೀತಿಯನ್ನು ಘೋಷಿಸಿತು, ಇದು ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಕಾರ್ಯಚಟುವಟಿಕೆಗಳನ್ನು ಪ್ರತ್ಯೇಕಿಸುವ ಮೂಲಕ ಕರ್ನಾಟಕ ವಿದ್ಯುತ್ ಮಂಡಳಿಯ ಪುನರ್-ರಚನೆ, ತದನಂತರ ವಿತರಣಾ ಕಾರ್ಯಚಟುವಟಿಕೆಯನ್ನು ಆರ್ಥಿಕವಾಗಿ ಕಾರ್ಯಸಾಧ್ಯತೆಯಿಂದ ಕೂಡಿರುವ ಅನೇಕ ಘಟಕಗಳನ್ನಾಗಿ ಪುನರ್-ರಚನೆಯನ್ನು ಒಳಗೊಂಡಿತ್ತು. ಮೇಲೆ ತಿಳಿಸಲಾದ ಕಾರ್ಯನೀತಿಯ ಅನುಸರಣೆಯಂತೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಸ್ಥಾಪನೆಯನ್ನು ಹಾಗೂ ಕರ್ನಾಟಕ ವಿದ್ಯುತ್ ಮಂಡಳಿಯ ಕಾರ್ಯಚಟುವಟಿಕೆಗಳನ್ನು ಪ್ರತ್ಯೇಕಿಸುವ ಮೂಲಕ ಪ್ರಸರಣ ಮತ್ತು ವಿತರಣಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಎರಡು ಹೊಸ ಕಂಪನಿಗಳು, ಅವೆಂದರೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಹಾಗೂ ವಿದ್ಯುತ್ ಉತ್ಪಾದನಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತದ (ವಿವಿಎನ್‌ಎಲ್) ರಚನೆಯನ್ನು (ಜುಲೈ 1999/ಆಗಸ್ಟ್ 1999) ಸಾಧ್ಯಗೊಳಿಸುವ ಸಲುವಾಗಿ ಕರ್ನಾಟಕ ವಿದ್ಯುತ್ ಸುಧಾರಣಾ ಅಧಿನಿಯಮ, 1999ನ್ನು ಜೂನ್ 1999ರಿಂದ ಜಾರಿಗೆ ಬರುವಂತೆ ಕಾರ್ಯರೂಪಕ್ಕೆ ತರಲಾಯಿತು.

ಕರ್ನಾಟಕ ಸರ್ಕಾರವು ವಿದ್ಯುತ್ ವಲಯದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಕೈಗೊಳ್ಳುವ ಸಲುವಾಗಿ ಹಾಗೂ ಪುನರ್-ರಚನಾ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ, ವಿದ್ಯುತ್ ಕಾರ್ಯನೀತಿ ಹೇಳಿಕೆಯನ್ನು ನೀಡಿತು (ಜನವರಿ 2001), ತದನಂತರ, ಆ ಕಾರ್ಯನೀತಿಯು, ರಾಜ್ಯದಲ್ಲಿನ ವಿವಿಧ ವರ್ಗದ ಬಳಕೆದಾರರುಗಳಿಗೆ ವಿಶ್ವಸನೀಯ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಸ್ಪರ್ಧಾತ್ಮಕ ದರಗಳಲ್ಲಿ ದಕ್ಷತೆಯಿಂದ ಕೂಡಿದ, ವಾಣಿಜ್ಯೀಯವಾಗಿ ಕಾರ್ಯಸಾಧ್ಯತೆಯಿಂದ ಕೂಡಿದ ಹಾಗೂ ಸ್ಪರ್ಧಾತ್ಮಕತೆಯಿಂದ ಕೂಡಿದ ವಿದ್ಯುತ್ ಸರಬರಾಜನ್ನು ಒದಗಿಸುವಂತಹ ವಿದ್ಯುತ್ ಸರಬರಾಜು ಕೈಗಾರಿಕೆಯ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಸಲುವಾಗಿ, ಇನ್ನಿತರವುಗಳ ಜೊತೆಯಲ್ಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವನ್ನು ಅನೇಕ ಸರಬರಾಜು ಸಂಸ್ಥೆಗಳನ್ನಾಗಿ ಪುನರ್-ರಚಿಸಲು ತೀರ್ಮಾನಿಸಲಾಗಿತ್ತು. ಈ ನಿಟ್ಟಿನಲ್ಲಿ, ರಾಜ್ಯದಲ್ಲಿನ ವಿವಿಧ ಪ್ರದೇಶಗಳನ್ನು ವ್ಯಾಪಿಸುವ ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ 1 ಜೂನ್ 2002ರಿಂದ ಜಾರಿಗೆ ಬರುವಂತೆ ಕಾರ್ಯಾರಂಭಗೊಂಡಂತಹ ನಾಲ್ಕು ಸ್ವತಂತ್ರ ವಿತರಣಾ ಕಂಪನಿಗಳನ್ನು ರಚಿಸಲಾಯಿತು, ಅವೆಂದರೆ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಹಾಗೂ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ). ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವನ್ನು ವಿಭಜಿಸಿ ಐದನೆಯ ವಿತರಣಾ ಕಂಪನಿ – ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯನ್ನು (ಸೆಸ್ಕ್) 1 ಜನವರಿ 2005ರಿಂದ ರಚಿಸಲಾಯಿತು. ಮುಂದುವರೆದು, ಈ ಹಿಂದಿನ ಕರ್ನಾಟಕ ವಿದ್ಯುತ್ ಮಂಡಳಿಯ ಉತ್ಪಾದನಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ರಚಿಸಲಾಗಿದ್ದ ವಿವಿಎನ್‌ಎಲ್ ಅನ್ನು ಕರ್ನಾಟಕ ವಿದ್ಯುತ್ ನಿಯಮ ನಿಯಮಿತದ ಜೊತೆಯಲ್ಲಿ ಸೇರ್ಪಡೆಗೊಳಿಸಲಾಯಿತು (ಏಪ್ರಿಲ್ 2006).

ಕರ್ನಾಟಕ ಸರ್ಕಾರವು ಸವಾಲು ಪ್ರಕ್ರಿಯೆಯ ಮೂಲಕ ಹೊಸ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಮೂಲಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸೇರ್ಪಡೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಪ್ರಯತ್ನಗಳಿಗೆ ಪೂರಕವಾಗಿರುವ ಸಲುವಾಗಿ ಹಾಗೂ ದೀರ್ಘಾವಧಿ ವಿದ್ಯುತ್ ಖರೀದಿ ವ್ಯವಸ್ಥೆಗಾಗಿ ಒಂದು ವಿಶೇಷ ಉದ್ದೇಶದ ವಾಹಕವನ್ನು ಅದೆಂದರೆ ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿಸಿಕೆಎಲ್) ಅನ್ನೂ ಸಹ ಸ್ಥಾಪಿಸಿತು (ಆಗಸ್ಟ್ 2007).

ರಾಜ್ಯ ಸರ್ಕಾರವು ಈಕ್ವಿಟಿ, ಸಾಲ, ಅನುದಾನ ಮತ್ತು ಸಹಾಯಾನುಧಾನದ ರೂಪದಲ್ಲಿ ಈ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಕಾಲಾನುಕಾಲಕ್ಕೆ ಹಣಕಾಸನ್ನು ಒದಗಿಸುವುದು. ರಾಜ್ಯ ಸರ್ಕಾರದಿಂದ ವಿದ್ಯುತ್ ವಲಯದಲ್ಲಿನ ಹೂಡಿಕೆ ಹಾಗೂ ಅದರ ಪ್ರಸ್ತುತ ಮೌಲ್ಯ ಹಾಗೂ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆಯನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ

**1.3.** 31 ಮಾರ್ಚ್ 2019ರಲ್ಲಿದ್ದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳು (ಒಂದು ಅಧೀನ–ಕಂಪನಿಯೂ ಸೇರಿದಂತೆ – ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್, ಒಂದು ಜಂಟಿ–ಉದ್ಯಮ – ರಾಯಚೂರು ವಿದ್ಯುತ್ ನಿಗಮ ನಿಯಮಿತ ಹಾಗೂ ಒಂದು ಸಹವರ್ತಿ ಕಂಪನಿಯು – ಪಿಸಿಕೆಎಲ್) ಇದ್ದವು. ವಿದ್ಯುತ್ ವಲಯಕ್ಕೆ ಸಂಬಂಧಿತ ಈ 11 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 31 ಮಾರ್ಚ್ 2019ರವರೆಗೆ ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳ ರೂಪದಲ್ಲಿ ಮಾಡಲಾಗಿರುವ ಹೂಡಿಕೆಗಳ ವಿವರಗಳನ್ನು ***ಅನುಬಂಧ–1 (ಎ)***ಯಲ್ಲಿ ನೀಡಲಾಗಿದೆ. 31 ಮಾರ್ಚ್ 2019ರಲ್ಲಿದ್ದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕಾರ್ಯಚಟುವಟಿಕೆವಾರು ಹೂಡಿಕೆಗಳು (ಈಕ್ವಿಟಿ ಮತ್ತು ದೀರ್ಘಾವಧಿ ಸಾಲಗಳು) ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ₹ 55,573.93 ಕೋಟಿ ಆಗಿತ್ತು.

**ಕೋಷ್ಟಕ ಸಂಖ್ಯೆ 1.2: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕಾರ್ಯಚಟುವಟಿಕೆವಾರು ಹೂಡಿಕೆ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಕಾರ್ಯಚಟುವಟಿಕೆ | ಸಾವಲುಗಳ ಸಂಖ್ಯೆ | ಹೂಡಿಕೆ[10] | | |
|---|---|---|---|---|---|
| | | | ಈಕ್ವಿಟಿ | ದೀರ್ಘಾವಧಿ ಸಾಲಗಳು | ಒಟ್ಟು |
| 1 | ವಿದ್ಯುತ್ ಉತ್ಪಾದನೆ[11] | 3 | 7,419.81 | 17,668.53 | 25,088.34 |
| 2 | ವಿದ್ಯುತ್ ಪ್ರಸರಣ[12] | 1 | 2,182.32 | 5,991.74 | 8,174.06 |
| 3 | ವಿದ್ಯುತ್ ವಿತರಣೆ[13] | 5 | 5,614.42 | 12,909.76 | 18,524.18 |
| 4 | ಇತರವುಗಳು[14] | 2 | 20.55 | 3,766.80 | 3,787.35 |
| | **ಒಟ್ಟು** | **11** | **15,237.10** | **40,336.83** | **55,573.93** |

ಮೇಲಿನ ಕೋಷ್ಟಕದಿಂದ ಕಂಡುಬಂದಂತೆ, ಒಟ್ಟಾರೆ ಹೂಡಿಕೆಯು ಶೇಕಡಾ 27.42ರಷ್ಟು ಈಕ್ವಿಟಿ ಹಾಗೂ ಶೇಕಡಾ 72.58ರಷ್ಟು ದೀರ್ಘಾವಧಿ ಸಾಲಗಳನ್ನು ಒಳಗೊಂಡಿರುತ್ತದೆ. ನೀಡಲಾಗಿರುವಂತಹ ಒಟ್ಟಾರೆ ದೀರ್ಘಾವಧಿ ಸಾಲಗಳು (₹ 40,336.83 ಕೋಟಿ) ರಾಜ್ಯ ಸರ್ಕಾರದ ಸಾಲಗಳು ಶೇಕಡಾ 4.81 (₹ 1,938.07 ಕೋಟಿ), ಕೇಂದ್ರ ಸರ್ಕಾರದ ಸಾಲಗಳು ಶೇಕಡಾ 4.24 (₹ 1,710.95 ಕೋಟಿ), ಹಾಗೂ ಇತರೆ ಹಣಕಾಸು ಸಂಸ್ಥೆಗಳಿಂದ ಶೇಕಡಾ 90.95ರಷ್ಟನ್ನು (₹ 36,687.81 ಕೋಟಿ) ಒಳಗೊಂಡಿದ್ದವು.

[10] ಹೂಡಿಕೆಗಳು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಹಿಡುವಳಿ ಕಂಪನಿಗಳಿಂದ ಹೂಡಿಕೆಗಳನ್ನು ಒಳಗೊಂಡಿರುತ್ತವೆ.

[11] ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ (ಕೆಪಿಸಿಜಿಪಿಸಿಎಲ್ – ಕವಿನಿನಿದ ಸಂಪೂರ್ಣ ಸ್ವಾಮ್ಯದಲ್ಲಿರುವ ಅಧೀನ–ಕಂಪನಿ), ರಾಯಚೂರು ವಿದ್ಯುತ್ ನಿಗಮ ನಿಯಮಿತ (ಕವಿನಿನಿ ಮತ್ತು ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ಲಿಮಿಟೆಡ್, ಇವುಗಳ ನಡುವಿನ ಒಂದು ಜಂಟಿ–ಉದ್ಯಮ).

[12] ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ.

[13] ಬೆಸ್ಕಾಂ, ಸೆಸ್ಕ್, ಜೆಸ್ಕಾಂ, ಹೆಸ್ಕಾಂ, ಮೆಸ್ಕಾಂ.

[14] ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ವಿತರಣಾ ಕಂಪನಿಗಳ ಒಂದು ಸಹಭಾಗಿ ಕಂಪನಿ).

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಆಯವ್ಯಯ ಬೆಂಬಲ

**1.4.** ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯದ ಮೂಲಕ ವಿವಿಧ ರೂಪಗಳಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಹಣಕಾಸಿನ ಬೆಂಬಲವನ್ನು ಒದಗಿಸಿತ್ತು. ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2018–19ಕ್ಕೆ ಅಂತ್ಯಗೊಂಡ ಮೂರು ವರ್ಷಗಳಿಗೆ ಈಕ್ವಿಟಿ, ಸಾಲಗಳು, ಅನುದಾನಗಳು/ಸಹಾಯಾನುಧಾನಗಳು, ಮನ್ನಾ ಮಾಡಲಾಗಿರುವ ಸಾಲಗಳು ಹಾಗೂ ಮನ್ನಾ ಮಾಡಲಾಗಿರುವ ಬಡ್ಡಿಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.3: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ರಾಜ್ಯ ಸರ್ಕಾರದಿಂದ ಆಯವ್ಯಯ ಬೆಂಬಲಕ್ಕೆ ಸಂಬಂಧಿತ ವಿವರಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2016-17 | | 2017-18 | | 2018-19 | |
|---|---|---|---|---|---|---|---|
| | | ಸಾವಲುಗಳ ಸಂಖ್ಯೆ | ಮೊತ್ತ | ಸಾವಲುಗಳ ಸಂಖ್ಯೆ | ಮೊತ್ತ | ಸಾವಲುಗಳ ಸಂಖ್ಯೆ | ಮೊತ್ತ |
| 1 | ಈಕ್ವಿಟಿ ಬಂಡವಾಳ | 5 | 871.80 | 5 | 805.77 | 5 | 580.23 |
| 2 | ನೀಡಲಾಗಿರುವ ಸಾಲಗಳು | 1 | 84.01 | 1 | 7.10 | 1 | 1,500.00 |
| 3 | ಒದಗಿಸಲಾಗಿದ್ದ ಅನುದಾನಗಳು/ ಸಹಾಯಾನುಧಾನಗಳು | 4 | 6,567.47 | 4 | 3,628.12 | 4 | 5,281.41 |
| **4** | **ಒಟ್ಟಾರೆ ಬಿಡುಗಡೆ** | | **7,523.28** | | **4,440.99** | | **7,361.64** |
| 5 | ಸಾಲಗಳು ಮತ್ತು ಬಡ್ಡಿಯನ್ನು ಮನ್ನಾ ಮಾಡಿರುವುದು | – | – | – | – | 1 | 28.47 |
| 6 | ನೀಡಲಾಗಿರುವ ಖಾತರಿಗಳು | 1 | 4.03 | 3 | 2,331.73 | 2 | 1,473.64 |
| 7 | ಖಾತರಿ ಬದ್ಧತೆ | 5 | 490.17 | 5 | 2,791.17[15] | 5 | 4,090.03 |

2018–19ಕ್ಕೆ ಅಂತ್ಯಗೊಂಡ ಐದು ಸಾಲುಗಳಿಗೆ ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಾನುಧಾನಗಳ ಕಡೆಗೆ ಆಯವ್ಯಯ ಬಿಡುಗಡೆಯ ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ:

**ರೇಖಾಚಿತ್ರ ಸಂಖ್ಯೆ 1.1: ಈಕ್ವಿಟಿ, ಸಾಲಗಳು, ಅನುದಾನಗಳು ಹಾಗೂ ಸಹಾಯಾನುಧಾನಗಳ ಕಡೆಗೆ ಆಯವ್ಯಯ ಬಿಡುಗಡೆ**

(₹ ಕೋಟಿಯಲ್ಲಿ)




2017–18ನ್ನು ಹೊರತುಪಡಿಸಿ 2018–19ಕ್ಕೆ ಅಂತ್ಯಗೊಂಡ ಐದು ವರ್ಷಗಳ ಅವಧಿಯಲ್ಲಿ ಈಕ್ವಿಟಿ, ಸಾಲಗಳು, ಅನುದಾನಗಳು ಮತ್ತು ಸಹಾಯಾನುಧಾನಗಳ ಕಡೆಗೆ ರಾಜ್ಯ ಸರ್ಕಾರದಿಂದ ಒದಗಿಸಲಾದ ಆಯವ್ಯಯ ಬೆಂಬಲವು ಏರಿಕೆಗೊಂಡಿತ್ತು. ಆಯವ್ಯಯ ಬೆಂಬಲವು ಹಿಂದಿನ ವರ್ಷಕ್ಕೆ (2017–18)

[15] 2018–19ರಲ್ಲಿ ಸ್ವೀಕರಿಸಿದ ಪರಿಷ್ಕೃತ ಮಾಹಿತಿಯ ಪ್ರಕಾರ, ಪಿಸಿಕೆಎಲ್‌ಗೆ ಸಂಬಂಧಿಸಿದ ₹ 2,300 ಕೋಟಿ ಮೊತ್ತವನ್ನು ಒಳಗೊಂಡಿದೆ.

ಹೋಲಿಸಿದರೆ 2018–19ರ ಸಾಲಿನಲ್ಲಿ ಶೇಕಡಾ 65.77ರಷ್ಟು ಏರಿಕೆಗೊಂಡಿತ್ತು. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಗೆ ₹ 3,229.97 ಕೋಟಿಗಳ ಅನುದಾನ/ಸಹಾಯಧನ ಮತ್ತು ₹ 1,500 ಕೋಟಿಗಳ ಸಾಲವನ್ನು ಮಂಜೂರು ಮಾಡಿದ್ದರಿಂದಾಗಿ 2018–19ರ ಸಾಲಿನಲ್ಲಿ ಆಯವ್ಯಯ ಬೆಂಬಲವು ಏರಿಕೆಯನ್ನು ಕಂಡಿತು. 2018–19ರಲ್ಲಿ ಸ್ವೀಕರಿಸಲಾದ ₹ 7,361.64 ಕೋಟಿ ಮೊತ್ತದಷ್ಟು ಆಯವ್ಯಯ ಬೆಂಬಲವು ₹ 580.23 ಕೋಟಿ ಮೊತ್ತದಷ್ಟು ಈಕ್ವಿಟಿ, ₹ 1,500 ಕೋಟಿ ಮೊತ್ತದಷ್ಟು ಸಾಲಗಳು ಹಾಗೂ ₹ 5,281.41 ಕೋಟಿ ಮೊತ್ತದಷ್ಟು ಅನುದಾನಗಳು ಮತ್ತು ಸಹಾಯಾನುಧಾನಗಳನ್ನು ಒಳಗೊಂಡಿತ್ತು.

## ಸಾಲಗಳಿಗೆ ನೀಡಿದ ಖಾತರಿಗಳು ಹಾಗೂ ಬಾಕಿಯಿರುವ ಖಾತರಿ ಕಮಿಷನ್‌ಗಳ ಸ್ಥಿತಿಗತಿ

**1.5.** ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಬ್ಯಾಂಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಹಣಕಾಸಿನ ನೆರವನ್ನು ಪಡೆಯುವುದನ್ನು ಸಾಧ್ಯಗೊಳಿಸುವ ಸಲುವಾಗಿ, ರಾಜ್ಯ ಸರ್ಕಾರವು ಸರ್ಕಾರಿ ಖಾತರಿಗಳ ಮೇಲೆ ಕರ್ನಾಟಕ ಸರ್ಕಾರದ ಪರಮಾವಧಿ ಅಧಿನಿಯಮ, 1999ರ (2002ರ ನಿಬಂಧನೆ 15ರ ಮೂಲಕ ತಿದ್ದುಪಡಿ ಮಾಡಲ್ಪಟ್ಟಂತೆ) ಅಡಿಯಲ್ಲಿ ಖಾತರಿಯನ್ನು ನೀಡುವುದು. ಸರ್ಕಾರವು ಖಾತರಿ ಕಮಿಷನ್ನಿನ ರೂಪದಲ್ಲಿ ಶೇಕಡಾ ಒಂದನ್ನು ವಿಧಿಸುವುದು, ಅದನ್ನು ಯಾವುದೇ ಸಂದರ್ಭದಲ್ಲಿಯೂ ಮನ್ನಾ ಮಾಡಲಾಗುವುದಿಲ್ಲ. ರಾಜ್ಯ ಸರ್ಕಾರದ ಖಾತರಿ ಬದ್ಧತೆಯು ಮೂರು ವರ್ಷಗಳ ಅವಧಿಯಲ್ಲಿ 2016–17ರಲ್ಲಿ ಇದ್ದಂತಹ ₹ 490.17 ಕೋಟಿಯಿಂದ 2018–19ರಲ್ಲಿ ₹ 4,090.03 ಕೋಟಿಗೆ ಏರಿಕೆಗೊಂಡಿತ್ತು. 2018–19ರ ಸಾಲಿನಲ್ಲಿ ಬಾಕಿ ಇದ್ದ ₹ 2.81 ಕೋಟಿ ಮೊತ್ತದಷ್ಟು ಖಾತರಿ ಮೊತ್ತವನ್ನು ಐದು[16] ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಪಾವತಿಸಿದ್ದವು.

## ಹಣಕಾಸು ಲೆಕ್ಕಪತ್ರಗಳ ಜೊತೆಯಲ್ಲಿ ಸಮನ್ವಯಗೊಳಿಸುವಿಕೆ

**1.6.** ಸಾರ್ವಜನಿಕ ವಲಯ ಉದ್ದಿಮೆಗಳ ದಾಖಲೆಗಳ ಅನುಸಾರ ಬಾಕಿಯಿದ್ದಂತಹ ಈಕ್ವಿಟಿ, ಸಾಲಗಳು ಮತ್ತು ಖಾತರಿಗಳು ರಾಜ್ಯದ ಹಣಕಾಸು ಲೆಕ್ಕಪತ್ರಗಳಲ್ಲಿ ಕಂಡುಬರುವಂತಹ ಅಂಕಿಸಂಖ್ಯೆಗಳ ಜೊತೆಯಲ್ಲಿ ತಾಳೆ ಹೊಂದತಕ್ಕದ್ದು. ಅಂತಹ ಅಂಕಿಸಂಖ್ಯೆಗಳು ಒಂದು ವೇಳೆ ತಾಳೆ ಹೊಂದದಿದ್ದಲ್ಲಿ, ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ಹಣಕಾಸು ಇಲಾಖೆಯು ಅಂತಹ ವ್ಯತ್ಯಾಸಗಳನ್ನು ಸಮನ್ವಯಗೊಳಿಸತಕ್ಕದ್ದು. ಈ ನಿಟ್ಟಿನಲ್ಲಿ 31 ಮಾರ್ಚ್ 2019ರಲ್ಲಿದ್ದಂತೆ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.4: ಹಣಕಾಸು ಲೆಕ್ಕಪತ್ರಗಳು ಹಾಗೂ ಅವುಗಳಿಗೆ ಅನುಗುಣವಾಗಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ದಾಖಲೆಗಳ ಪ್ರಕಾರ ಬಾಕಿಯಿರುವ ಈಕ್ವಿಟಿ, ಸಾಲಗಳು ಮತ್ತು ಖಾತರಿಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಬಾಕಿಯಿರುವುದು | ಹಣಕಾಸು ಲೆಕ್ಕಪತ್ರಗಳ ಅನುಸಾರ ಮೊತ್ತ ^ | ಸಾರ್ವಜನಿಕ ವಲಯ ಉದ್ದಿಮೆಗಳ ದಾಖಲೆಗಳ ಅನುಸಾರ ಮೊತ್ತ | ವ್ಯತ್ಯಾಸ |
|---|---|---|---|---|
| | (1) | (2) | (3) | (4 = 2–3) |
| 1 | ಈಕ್ವಿಟಿ | 10,771.74 | 12,566.69 | (–) 1,794.95 |
| 2 | ಸಾಲಗಳು | 2,386.17 | 1,938.07 | 448.10 |
| 3 | ಖಾತರಿಗಳು | 4,202.64 | 4,090.03 | 112.61 |

^ **ಮೂಲ:** ಹಣಕಾಸು ಲೆಕ್ಕಪತ್ರಗಳಲ್ಲಿನ ತಃಖ್ತೆ ಸಂಖ್ಯೆ 18 (ಸಾಲಗಳು), 19 (ಈಕ್ವಿಟಿ) ಮತ್ತು 20 (ಖಾತರಿಗಳು).

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯದ ಒಂಬತ್ತು ಉದ್ದಿಮೆಗಳಿಗೆ ಸಂಬಂಧಿಸಿದಂತೆ ***ಅನುಬಂಧ 2(ಎ)***ನಲ್ಲಿ ತೋರಿಸಿರುವಂತೆ ವ್ಯತ್ಯಾಸಗಳಿದ್ದವು. ಸರ್ಕಾರ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳು ವ್ಯತ್ಯಾಸಗಳನ್ನು ಒಂದು ಕಾಲಮಿತಿಯೊಳಗೆ ಸಮನ್ವಯಗೊಳಿಸುವ ಸಲುವಾಗಿ ಸದೃಢ

[16] ಕೆಪಿಸಿಎಲ್, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ ಮತ್ತು ಜೆಸ್ಕಾಂ. ಪಿಸಿಕೆಎಲ್ ಪಾವತಿಸಬೇಕಿದ್ದ ಖಾತರಿ ಕಮಿಷನನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸಿದ್ದವು.

ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ವ್ಯತ್ಯಾಸಗಳನ್ನು ಸರಿಪಡಿಸುವ/ಹೊಂದಾಣಿಕೆ ಮಾಡುವ ಸಲುವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ**

**1.7.** ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96(1)ರ ಅನುಸಾರ ಕಂಪನಿಗಳ ಪ್ರತಿಯೊಂದು ಸಾಲಿನ ಹಣಕಾಸು ತ:ಖ್ತೆಗಳನ್ನು ಸಂಬಂಧಿತ ಸಾಲು ಅಂತ್ಯಗೊಂಡ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ ಅಂತ್ಯದ ವೇಳೆಗೆ ಅಂತಿಮ ರೂಪಕ್ಕೆ ತರುವ ಅಗತ್ಯತೆಯಿರುತ್ತದೆ. ಆ ರೀತಿ ಮಾಡಲು ವಿಫಲಗೊಂಡಲ್ಲಿ ಅಧಿನಿಯಮದ ಪರಿಚ್ಛೇದ 99ರ ಅಡಿಯಲ್ಲಿ ದಂಡದ ಅನುವುಗಳನ್ನು ಆಕರ್ಷಿಸಬಹುದು.

30 ಸೆಪ್ಟಂಬರ್ 2019ರ ವೇಳೆಗೆ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು ಸಾಧಿಸಿದ್ದ ಪ್ರಗತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುವುದು:

**ಕೋಷ್ಟಕ ಸಂಖ್ಯೆ 1.5: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವುದಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿ**

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಸಾವಉಗಳ ಸಂಖ್ಯೆ | 11 | 11 | 11 | 11 | 11 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಒಟ್ಟು ಸಂಖ್ಯೆ | 14 | 9 | 6 | 17 | 11 |
| | ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 10 | 8 | 3 | 9 | 9 |
| | ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 4 | 1 | 3 | 8 | 2 |
| 3 | ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳಲ್ಲಿರುವ ಲೆಕ್ಕಪತ್ರಗಳ ಸಂಖ್ಯೆ | 1 | 3 | 8 | 2 | 2 |
| 4 | ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿ ಬಾಕಿಗಳನ್ನು ಹೊಂದಿರುವ ಸಾವಉಗಳ ಸಂಖ್ಯೆ | 1 | 3 | 8 | 2 | 2 |
| 5 | ಬಾಕಿಗಳ ವಿಸ್ತಾರ (ಸಂಖ್ಯೆ ವರ್ಷಗಳಲ್ಲಿ) | 1 ವರ್ಷ | 1 ವರ್ಷ | 1 ವರ್ಷ | 1 ವರ್ಷ | 1 ವರ್ಷ |

2018–19ರಲ್ಲಿ, 10 ಕಂಪನಿಗಳು 11 ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತಂದವು ಹಾಗೂ ಎರಡು ಸಾರ್ವಜನಿಕ ವಲಯ ಉದ್ದಿಮೆಗಳಿಗೆ[17] ಸಂಬಂಧಿಸಿದಂತೆ ಎರಡು ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವುದು ಬಾಕಿಯಿತ್ತು.

**1.8.** ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಎರಡು ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಒಂದರಲ್ಲಿ ಪ್ರಸಕ್ತ ಸಾಲಿನಲ್ಲಿ ₹ 107.20 ಕೋಟಿ ಮೊತ್ತವನ್ನು ಹೂಡಿಕೆ ಮಾಡಿತ್ತು, ***ಅನುಬಂಧ–3***ರಲ್ಲಿ (ಕ್ರಮ ಸಂಖ್ಯೆ 40) ವಿವರಿಸಿರುವಂತೆ ಅವುಗಳ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿರಲಿಲ್ಲ. ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಹಾಗೂ ತದನಂತರ ಅವುಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸುವಲ್ಲಿನ ಅನುಪಸ್ಥಿತಿಯಲ್ಲಿ, ಮಾಡಲಾದಂತಹ ಹೂಡಿಕೆಗಳು ಹಾಗೂ ಭರಿಸಲಾದಂತಹ ವೆಚ್ಚಗಳನ್ನು ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕವನ್ನಿಡಲಾಗಿತ್ತೇ ಹಾಗೂ ಯಾವ ಉದ್ದೇಶಕ್ಕಾಗಿ ಮೊತ್ತವನ್ನು ಹೂಡಿಕೆ ಮಾಡಲಾಗಿತ್ತೋ ಅಂತಹ ಉದ್ದೇಶವು ಈಡೇರಿತೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಈ ರೀತಿಯಾಗಿ, ಅಂತಹ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರದ ಹೂಡಿಕೆಯು ರಾಜ್ಯ ಶಾಸಕಾಂಗದ ನಿಯಂತ್ರಣದ ಹೊರಗೆ ಉಳಿದುಕೊಂಡಿತ್ತು.

[17] ಕೆಪಿಟಿಸಿಎಲ್ ಮತ್ತು ಜೆಸ್ಕಾಂ (***ಅನುಬಂಧ–3ರ*** ಕ್ರಮ ಸಂಖ್ಯೆ 39 ಮತ್ತು 40).

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಅಂತಿಮ ರೂಪಕ್ಕೆ ತರಲ್ಪಟ್ಟಂತಹ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ ಅವುಗಳ ಕಾರ್ಯನಿರ್ವಹಣೆ

**1.9.** 30 ಸೆಪ್ಟಂಬರ್ 2019ರಲ್ಲಿದ್ದಂತೆ ಅಂತಿಮ ರೂಪಕ್ಕೆ ತರಲ್ಪಟ್ಟಂತಹ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಸ್ಥಿತಿಗತಿ ಹಾಗೂ ಕಾರ್ಯನಿರ್ವಹಣೆಯ ಫಲಿತಾಂಶಗಳನ್ನು ***ಅನುಬಂಧ-4(ಎ)***ನಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿನ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ 2014-15ರಿಂದ 2018-19 ಸಾಲುಗಳಲ್ಲಿ ಗಳಿಸಿರುವ (ಭರಿಸಿರುವಂತಹ) ಒಟ್ಟಾರೆ ಲಾಭ (ನಷ್ಟಗಳನ್ನು)[18] ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 1.2: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭ/ನಷ್ಟ**

**(₹ ಕೋಟಿಯಲ್ಲಿ)**




**(ಅಂಕಣದಲ್ಲಿರುವ ಸಂಖ್ಯೆಗಳು ಸಂಬಂಧಿತ ಸಾಲಿನಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಯನ್ನು ತೋರಿಸುತ್ತವೆ)**

ವಿದ್ಯುತ್ ವಲಯಕ್ಕೆ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಅವುಗಳ ಅಂತಿಮ ರೂಪಕ್ಕೆ ತರಲ್ಪಟ್ಟ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ, ಐದು[19] ಉದ್ದಿಮೆಗಳು ₹ 1,086.71 ಕೋಟಿ ಮೊತ್ತದಷ್ಟು ಲಾಭವನ್ನು ಗಳಿಸಿದ್ದವು ಹಾಗೂ ಆರು[20] ಉದ್ದಿಮೆಗಳು ₹ 2,928.68 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿದ್ದವು.

---

[18] 2017-18 ಮತ್ತು 2018-19ರ ಲಾಭ/ನಷ್ಟಗಳನ್ನು ಇತರೆ ಸಮಗ್ರ ಆದಾಯ (ಒಸಿಐ) ವನ್ನು ಪರಿಗಣಿಸಿ ಲೆಕ್ಕಹಾಕಲಾಗಿದೆ.

[19] ಒಂದು ಲೆಕ್ಕಪತ್ರಗಳು 2017-18 ಸಾಲಿಗೆ ಸಂಬಂಧಿಸಿದ್ದು ಹಾಗೂ ನಾಲ್ಕು ಲೆಕ್ಕಪತ್ರಗಳು 2018-19 ಸಾಲಿಗೆ ಸಂಬಂಧಿಸಿದ್ದವು.

[20] ಒಂದು ಲೆಕ್ಕಪತ್ರಗಳು 2017-18 ಸಾಲಿಗೆ ಸಂಬಂಧಿಸಿದ್ದು ಹಾಗೂ ಐದು ಲೆಕ್ಕಪತ್ರಗಳು 2018-19 ಸಾಲಿಗೆ ಸಂಬಂಧಿಸಿದ್ದವು.

ಲಾಭಕ್ಕೆ ಬಹಳಷ್ಟು ಪ್ರಮಾಣದಲ್ಲಿ ಕಾಣಿಕೆಗಳನ್ನು ನೀಡಿದ್ದ ಉದ್ದಿಮೆಗಳೆಂದರೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (₹ 690 ಕೋಟಿ) ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (₹ 212.14 ಕೋಟಿ). ರಾಯಚೂರು ವಿದ್ಯುತ್ ನಿಗಮ ನಿಯಮಿತ (₹ 1,251.30 ಕೋಟಿ), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (₹ 992.06 ಕೋಟಿ), ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (₹ 472.63 ಕೋಟಿ) ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (₹ 209.35 ಕೋಟಿ), ಇವು ಬೃಹತ್ ಪ್ರಮಾಣದಲ್ಲಿ ನಷ್ಟಗಳನ್ನು ಅನುಭವಿಸಿದ್ದವು.

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು 2014-15, 2015-16 ಹಾಗೂ 2016-17 ಸಾಲುಗಳಲ್ಲಿ ಅನುಕ್ರಮವಾಗಿ ₹ 372.60 ಕೋಟಿ, ₹ 422.87 ಕೋಟಿ ಹಾಗೂ ₹ 19.25 ಕೋಟಿ ಮೊತ್ತಗಳಷ್ಟು ಒಟ್ಟಾರೆ ನಿವ್ವಳ ಲಾಭಗಳನ್ನು ತೋರಿಸಿದ್ದವು ಹಾಗೂ 2017-18 ಮತ್ತು 2018-19ರಲ್ಲಿ ಅನುಕ್ರಮವಾಗಿ ₹ 1,605.58 ಕೋಟಿ ಹಾಗು ₹ 1,841.97 ಕೋಟಿ ಮೊತ್ತದಷ್ಟು ಒಟ್ಟಾರೆ ನಿವ್ವಳ ನಷ್ಟಗಳನ್ನು ಭರಿಸಿದ್ದವು.

2014-15ರಿಂದ 2018-19 ಸಾಲುಗಳಲ್ಲಿ ಲಾಭವನ್ನು ಗಳಿಸಿದ/ನಷ್ಟವನ್ನು ಭರಿಸಿದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 1.6: ಲಾಭವನ್ನು ಗಳಿಸಿದ/ನಷ್ಟವನ್ನು ಭರಿಸಿದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು**

| ಕ್ರಮ ಸಂಖ್ಯೆ | ವರ್ಷ | ವಿದ್ಯುತ್ ವಲಯದಲ್ಲಿನ ಸಾರ್ವಜನಿಕ ವಲಯ ಉದ್ದಿಮೆಗಳ[21] ಒಟ್ಟಾರೆ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ ಲಾಭವನ್ನು ಗಳಿಸಿದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ ನಷ್ಟವನ್ನು ಭರಿಸಿದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|---|---|
| 1 | 2014-15 | 10 | 9 | 1 |
| 2 | 2015-16 | 10 | 8 | 2 |
| 3 | 2016-17 | 10 | 7 | 3 |
| 4 | 2017-18 | 11 | 6 | 5 |
| 5 | 2018-19 | 11 | 5 | 6 |

**ವಿದ್ಯುತ್ ವಲಯಕ್ಕೆ ಸಂಬಂಧಿಸಿದ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿದ್ದ ಸರ್ಕಾರದ ಹಣಕಾಸಿನ ಮೇಲೆ ಬಂದಂತಹ ಪ್ರತಿಫಲ**

**1.10**. ಒಂದು ಕಂಪನಿಯ ಲಾಭದಾಯಕತೆಯನ್ನು ಹೂಡಿಕೆಯ ಮೇಲಿನ ಪ್ರತಿಫಲ, ಈಕ್ವಿಟಿಯ ಮೇಲಿನ ಪ್ರತಿಫಲ ಹಾಗೂ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲದ ಮೂಲಕ ಸಾಂಪ್ರದಾಯಿಕವಾಗಿ ನಿರ್ಧಾರಣೆ ಮಾಡಲಾಗುವುದು. ಹೂಡಿಕೆಯ ಮೇಲಿನ ಪ್ರತಿಫಲವು ಈಕ್ವಿಟಿಯ ರೂಪದಲ್ಲಿ ಹೂಡಿಕೆ ಮಾಡಲಾಗಿರುವ ಹಣಕಾಸಿನ ಪ್ರಮಾಣ ಹಾಗೂ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಒಂದು ನಿಗದಿತ ಸಾಲಿನಲ್ಲಿ ಗಳಿಸಲಾದ ಲಾಭ ಅಥವಾ ಭರಿಸಲಾದ ನಷ್ಟವನ್ನು ಅಳೆಯುತ್ತದೆ ಹಾಗೂ ಒಟ್ಟಾರೆ ಹೂಡಿಕೆಗೆ ಹೋಲಿಸಿದಂತೆ ಲಾಭದ ಒಂದು ಶೇಕಡಾವಾರಿನಂತೆ ವ್ಯಕ್ತಪಡಿಸಲಾಗುತ್ತದೆ. ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವು ಕಂಪನಿಯ ಲಾಭದಾಯಕತೆ ಹಾಗೂ ಬಳಸಲಾದಂತಹ ಅದರ ಬಂಡವಾಳದ ದಕ್ಷತೆಯನ್ನು ಅಳೆಯುವಂತಹ ಒಂದು ಹಣಕಾಸಿನ ಅನುಪಾತವಾಗಿರುತ್ತದೆ ಹಾಗೂ ಬಡ್ಡಿ ಮತ್ತು ತೆರಿಗೆ ಪಾವತಿಗೆ ಮುಂಚಿನ ಕಂಪನಿಯ

[21] 2014-15ರಿಂದ 2016-17 ಸಾಲುಗಳಲ್ಲಿ ರಾಯಚೂರು ವಿದ್ಯುತ್ ನಿಗಮ ನಿಯಮಿತವು ಯೋಜನೆಯ ನಿರ್ಮಾಣದ ಅವಧಿಯಲ್ಲಿದ್ದುದರಿಂದ ಲಾಭ ಮತ್ತು ನಷ್ಟ ತಃಖ್ತೆಯನ್ನು ತಯಾರಿಸಿರಲಿಲ್ಲ. ಆದ್ದರಿಂದ, ಅದನ್ನು ವಿದ್ಯುತ್ ವಲಯಕ್ಕೆ ಸಂಬಂಧಿತ ಒಟ್ಟಾರೆ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಗೆ ಪರಿಗಣಿಸಲಿಲ್ಲ.

ಗಳಿಕೆಗಳನ್ನು ಹೂಡಿಕೆ ಮಾಡಲಾದ ಬಂಡವಾಳದಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು. ಈಕ್ವಿಟಿಯ ಮೇಲಿನ ಪ್ರತಿಫಲವು ತೆರಿಗೆಯನ್ನು ಪಾವತಿಸಿದನಂತರದ ನಿವ್ವಳ ಲಾಭವನ್ನು ಷೇರುದಾರರುಗಳ ನಿಧಿಯಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವ ಕಾರ್ಯದಕ್ಷತೆಯ ಒಂದು ಅಳತೆಯಾಗಿರುತ್ತದೆ. ಈ ಪರಿಮಿತಿಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

***ಹೂಡಿಕೆಯ ಮೇಲಿನ ಪ್ರತಿಫಲ***

**1.10.1.** ಸರ್ಕಾರವು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವ ಹೂಡಿಕೆಯ ಮೇಲೆ ಸಾರ್ವಜನಿಕ ವಲಯ ಉದ್ದಿಮೆಗಳು ಒಂದು ನ್ಯಾಯಸಮ್ಮತ ಪ್ರತಿಫಲವನ್ನು ಉತ್ಪಾದಿಸುವುದನ್ನು ನಿರೀಕ್ಷಿಸಲಾಗುತ್ತದೆ. 31 ಮಾರ್ಚ್ 2019ರಲ್ಲಿದ್ದಂತೆ ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ₹ 12,566.69 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 1,938.07 ಕೋಟಿ ಮೊತ್ತದಷ್ಟು ದೀರ್ಘಾವಧಿ ಸಾಲಗಳನ್ನು ಒಳಗೊಂಡಂತೆ ಒಟ್ಟಾರೆ ₹ 14,504.76 ಕೋಟಿ ಮೊತ್ತದಷ್ಟು ಹೂಡಿಕೆಯನ್ನು ಮಾಡಲಾಗಿತ್ತು.

ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ಹೂಡಿಕೆಯು 2014–15ರಲ್ಲಿದ್ದಂತೆ ₹ 9,495.80 ಕೋಟಿಯಿಂದ 2018–19ರಲ್ಲಿ ₹ 14,504.76 ಕೋಟಿಗೆ ಅಂದರೆ ಶೇಕಡಾ 52.75ರಷ್ಟು ವೃದ್ಧಿಯಾಗಿತ್ತು.

**ರೇಖಾಚಿತ್ರ ಸಂಖ್ಯೆ 1.3: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರವು ಮಾಡಿದ್ದ ಹೂಡಿಕೆ**

**(₹ ಕೋಟಿಯಲ್ಲಿ)**




***ಹೂಡಿಕೆಯ ಮೂಲ ಮೌಲ್ಯದ ಆಧಾರದ ಮೇರೆಗಿನ ಪ್ರತಿಫಲ***

**1.10.2.** ವಿದ್ಯುತ್ ವಲಯ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ರಾಜ್ಯ ಸರ್ಕಾರವು ವಿದ್ಯುತ್ ವಲಯ ಸಂಬಂಧಿತ ಕೇವಲ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಈಕ್ವಿಟಿ, ಬಡ್ಡಿರಹಿತ ಸಾಲಗಳು ಹಾಗೂ ಅನುದಾನಗಳು/ಸಹಾಯಾನುಧಾನಗಳ ರೂಪದಲ್ಲಿ ಹಣಕಾಸನ್ನು ತೊಡಗಿಸಿತ್ತು. ಸರ್ಕಾರವು 2018–19ರವರೆಗೂ ವಿದ್ಯುತ್ ವಲಯಕ್ಕೆ ಸಂಬಂಧಿತ ಇತರೆ ಮೂರು[22] ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಯಾವುದೇ ಹಣಕಾಸನ್ನು ನೇರವಾಗಿ ಹೂಡಿಕೆ ಮಾಡಿರಲಿಲ್ಲ ಹಾಗೂ ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಸಾರ್ವಜನಿಕ ವಲಯ ಉದ್ದಿಮೆಗಳ ಈಕ್ವಿಟಿಯನ್ನು ಸಂಬಂಧಿತ ಹಿಡುವಳಿ ಕಂಪನಿಗಳು ವಿತರಿಸಿದ್ದವು.

ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ರಾಜ್ಯ ಸರ್ಕಾರದ ಹೂಡಿಕೆಯನ್ನು ಈಕ್ವಿಟಿಗೆ (ಕ್ರೋಢೀಕೃತ ನಷ್ಟಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಕಳೆದನಂತರ

[22] ಕೆಪಿಸಿಜಿಪಿಸಿಎಲ್, ಆರ್‌ಪಿಸಿಎಲ್ ಮತ್ತು ಪಿಸಿಕೆಎಲ್.

ನಿವ್ವಳ ಮೂಲ ಈಕ್ವಿಟಿ ಮತ್ತು ಇದಕ್ಕೆ ತದನಂತರದ ಸಾಲುಗಳಲ್ಲಿ ತೊಡಗಿಸಿದ ಈಕ್ವಿಟಿಯನ್ನು ಸೇರಿಸಿ), ಇದಕ್ಕೆ ಬಡ್ಡಿ ರಹಿತ ಸಾಲಗಳನ್ನು ಕೂಡಿದನಂತರ ಹಾಗೂ ಅದರಿಂದ ತದನಂತರದಲ್ಲಿ ಪ್ರತೀ ಸಾಲಿನಲ್ಲಿಯೂ ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿರುವ ಬಡ್ಡಿರಹಿತ ಸಾಲಗಳು, ಯಾವುದಾದರೂ ಇದ್ದಲ್ಲಿ ಅವುಗಳನ್ನು ಕಳೆಯುವ ಮೂಲಕ ಲೆಕ್ಕಹಾಕಲಾಗಿರುವುದು.

ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಲಾದ ಬಡ್ಡಿರಹಿತ ಸಾಲಗಳನ್ನು ಮರುಪಾವತಿಸಿರದಿರುವುದರಿಂದ ಹಾಗೂ ಸಾಲಗಳನ್ನು ಮಂಜೂರು ಮಾಡಿದ ತದನಂತರದಲ್ಲಿ ಅಂತಹ ಸಾಲಗಳ ಒಂದು ಭಾಗವನ್ನು ಈಕ್ವಿಟಿಗೆ ಪರಿವರ್ತಿಸಿರುವುದರಿಂದ ಹಾಗೂ ಅವುಗಳನ್ನು ಈಕ್ವಿಟಿಗೆ ಸಮಾನವೆಂಬುದಾಗಿ ಪರಿಗಣಿಸಲಾಗಿರುವುದರಿಂದ ಒಟ್ಟಾರೆ ದೀರ್ಘಾವಧಿ ಸಾಲಗಳ ಪೈಕಿ, ಕೇವಲ ಬಡ್ಡಿರಹಿತ ಸಾಲಗಳನ್ನು ಮಾತ್ರ ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರದ ಹೂಡಿಕೆ ಎಂಬುದಾಗಿ ಪರಿಗಣಿಸಲಾಯಿತು. ಮುಂದುವರೆದು, ಅನುದಾನಗಳು/ಸಹಾಯಾನುಧನಗಳ ರೂಪದಲ್ಲಿ ಲಭ್ಯವಾಗುವಂತೆ ಮಾಡಲಾಗಿರುವ ಹಣಕಾಸು ಹೂಡಿಕೆ ಎಂಬುದಾಗಿ ಪರಿಗಣಿಸಲು ಅರ್ಹತೆಯನ್ನು ಹೊಂದಿರುವುದಿಲ್ಲವಾದ್ದರಿಂದ ಅದನ್ನು ಒಂದು ಹೂಡಿಕೆಯನ್ನಾಗಿ ಪರಿಗಣಿಸಿರುವುದಿಲ್ಲ.

31 ಮಾರ್ಚ್ 2019ರಲ್ಲಿದ್ದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ರಾಜ್ಯ ಸರ್ಕಾರದ ಹೂಡಿಕೆಯು ₹ 12,566.69 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 1,938.07 ಕೋಟಿ ಮೊತ್ತದಷ್ಟು ದೀರ್ಘಾವಧಿ ಸಾಲವನ್ನು ಒಳಗೊಂಡಂತೆ ಒಟ್ಟಾರೆ ₹ 14,504.76 ಕೋಟಿ ಆಗಿತ್ತು. ಬಿಡುಗಡೆಗೊಳಿಸಲಾಗಿದ್ದ ದೀರ್ಘಾವಧಿ ಸಾಲಗಳ ಪೈಕಿ, ₹ 0.94 ಕೋಟಿ ಮೊತ್ತವು ಬಡ್ಡಿರಹಿತ ಸಾಲವಾಗಿತ್ತು. ಈ ರೀತಿಯಾಗಿ, ₹ 12,566.69 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 0.94 ಕೋಟಿ ಮೊತ್ತದಷ್ಟು ಬಡ್ಡಿ ರಹಿತ ಸಾಲವನ್ನು ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆ ಎಂಬುದಾಗಿ ಪರಿಗಣಿಸಿದಂತೆ, 2018–19ರ ಅಂತ್ಯದಲ್ಲಿ ಮೂಲ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಯು ₹ 12,567.63 ಕೋಟಿ ಆಗಿತ್ತು.

2014–15ರಿಂದ 2018–19ರ ಅವಧಿಗೆ ಮೂಲ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಯ ಮೇಲಿನ ಪ್ರತಿಫಲವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.7: ಮೂಲ ಮೌಲ್ಯದ ಆಧಾರದ ಮೇರೆಗೆ ರಾಜ್ಯ ಸರ್ಕಾರದ ಹೂಡಿಕೆಯ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ನಿವ್ವಳ ಲಾಭ/ ನಷ್ಟ (–)[23] (₹ ಕೋಟಿಯಲ್ಲಿ) | ವರ್ಷದ ಅಂತ್ಯದಲ್ಲಿದ್ದಂತೆ ಈಕ್ವಿಟಿ[24] ಮತ್ತು ಬಡ್ಡಿ ರಹಿತ ಸಾಲಗಳು (₹ ಕೋಟಿಯಲ್ಲಿ) | ಹೂಡಿಕೆಯ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| 1 | 2014–15 | 372.62 | 9,377.87 | 3.97 |
| 2 | 2015–16 | 422.64 | 10,309.83 | 4.10 |
| 3 | 2016–17 | 21.29 | 11,181.63 | 0.19 |
| 4 | 2017–18 | –39.61 | 11,987.40 | –0.33 |
| 5 | 2018–19 | –587.33 | 12,567.63 | –4.67 |

2014–15 ಹಾಗೂ 2018–19ರಲ್ಲಿ ಹೂಡಿಕೆಯ ಮೇಲಿನ ಪ್ರತಿಫಲವು ನಕಾರಾತ್ಮಕವಾಗಿತ್ತು ಹಾಗೂ 2014–15ರಲ್ಲಿದ್ದಂತಹ ಶೇಕಡ 3.97 2016–17ರಲ್ಲಿ ಶೇಕಡಾ 0.19ಕ್ಕೆ ಇಳಿಮುಖಗೊಂಡಿತ್ತು. 2014–15 ಹಾಗೂ 2018–19ರಲ್ಲಿನ ನಕಾರಾತ್ಮಕ ಪ್ರತಿಫಲಕ್ಕೆ ಪ್ರಮುಖ ಕಾರಣವೆಂದರೆ 2017–18ರಲ್ಲಿ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ನಷ್ಟ ಹಾಗೂ 2018–19ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ನಷ್ಟ.

[23] ಅಂತಿಮರೂಪಕ್ಕೆ ತರಲಾಗಿರುವ ಇತ್ತೀಚಿನ ಲೆಕ್ಕಪತ್ರಗಳ ಅನುಸಾರ.

[24] ಈಕ್ವಿಟಿಯು ಷೇರು ಠೇವಣಿ/ಹಂಚಿಕೆ ಬಾಕಿ ಇರುವ ಷೇರು ಅರ್ಜಿ ಹಣವನ್ನು ಒಳಗೊಂಡಿರುತ್ತದೆ.

***ಹೂಡಿಕೆಯ ಪ್ರಸ್ತುತ ಮೌಲ್ಯದ ಆಧಾರದ ಮೇರೆಗೆ ಪ್ರತಿಫಲ***

**1.10.3**. ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರದಿಂದ ಆಗಿರುವಂತಹ ಗಮನಾರ್ಹ ಹೂಡಿಕೆಯ ದೃಷ್ಟಿಯಿಂದ, ಅಂತಹ ಹೂಡಿಕೆಯ ಮೇಲೆ ಪ್ರತಿಫಲವು ರಾಜ್ಯ ಸರ್ಕಾರದ ಪರಿಪ್ರೇಕ್ಷ್ಯೆಯಿಂದ ಅತ್ಯಗತ್ಯವಾಗಿರುತ್ತದೆ. ಕೇವಲ ಹೂಡಿಕೆಯ ಮೂಲ ಮೌಲ್ಯದ ಆಧಾರದ ಮೇರೆಗೆ ಮಾತ್ರ ಪ್ರತಿಫಲದ ಸಾಂಪ್ರದಾಯಿಕ ಲೆಕ್ಕಾಚಾರವು, ಅಂತಹ ಲೆಕ್ಕಾಚಾರಗಳು ಹಣದ ಪ್ರಸಕ್ತ ಮೌಲ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಹೂಡಿಕೆಯ ಮೇಲಿನ ಪ್ರತಿಫಲದ ಸಮರ್ಪಕತೆಯ ಒಂದು ಯಥಾರ್ಥತೆಯಿಂದ ಕೂಡಿದ ಸೂಚಕವಾಗಿರುವುದಿಲ್ಲಹೂಡಿಕೆಯ ಮೂಲ ಮೌಲ್ಯಕ್ಕೆ ಹೋಲಿಸಿದಂತೆ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯದ ಮೇಲಿನ ಪ್ರತಿಫಲದ ದರವನ್ನು ನಿರ್ಧಾರಣೆ ಮಾಡುವ ಸಲುವಾಗಿ ಸರ್ಕಾರಿ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕಲಾಯಿತು. 31 ಮಾರ್ಚ್ 2019ರವರೆಗೆ ಪ್ರತೀ ಸಾಲಿನ ಅಂತ್ಯದಲ್ಲಿದ್ದಂತೆ ಮೂಲ ಮೌಲ್ಯವನ್ನು ಅದರ ಪ್ರಸಕ್ತ ಮೌಲ್ಯಕ್ಕೆ ತರುವ ಸಲುವಾಗಿ, ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕರ್ನಾಟಕ ಸರ್ಕಾರವು ಹೂಡಿಕೆ ಮಾಡಿದ್ದಂತಹ ಹಿಂದಿನ ಹೂಡಿಕೆಗಳು/ವರ್ಷವಾರು ಹಣಕಾಸನ್ನು ಸಂಬಂಧಿತ ಸಾಲಿಗೆ ಸರ್ಕಾರದ ಸಾಲಗಳ ಮೇಲೆ ವರ್ಷವಾರು ಸರಾಸರಿ ಬಡ್ಡಿ ದರದಲ್ಲಿ ಸಂಯೋಜಿಸಲಾಯಿತು. ಈ ದರವು ಆಯಾ ಸಾಲಿನಲ್ಲಿ ಸರ್ಕಾರದ ಹಣಕಾಸಿಗೆ ತಗುಲುವ ಕನಿಷ್ಠ ವೆಚ್ಚವಾಗಿ ಪರಿಗಣಿಸಲಾಗಿದೆ.

ಆದ್ದರಿಂದ, 2009–10ರವರೆಗೆ ಮತ್ತು 2010–11ರಿಂದ 2018–19ರಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ರಾಜ್ಯ ಸರ್ಕಾರವು ಎಲ್ಲಿ ಈಕ್ವಿಟಿ ಮತ್ತು ಬಡ್ಡಿರಹಿತ ಸಾಲವನ್ನು ಹೂಡಿಕೆ ಮಾಡಿತ್ತೋ ಅಲ್ಲಿ ರಾಜ್ಯ ಸರ್ಕಾರದ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕಲಾಯಿತು. ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಪ್ರಸಕ್ತ ಮೌಲ್ಯವನ್ನು ಈ ಕೆಳಗಿನ ಪರಿಕಲ್ಪನೆಗಳೊಂದಿಗೆ ಲೆಕ್ಕಹಾಕಲಾಯಿತು.

- ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಬಡ್ಡಿರಹಿತ ಸಾಲಗಳ ಯಾವುದೇ ಮೊತ್ತವನ್ನು ಮರುಪಾವತಿಸಿರಲಿಲ್ಲವಾದ್ದರಿಂದ ಬಡ್ಡಿರಹಿತ ಸಾಲಗಳನ್ನು ರಾಜ್ಯ ಸರ್ಕಾರವು ಮಾಡಿರುವ ಹೂಡಿಕೆ ಎಂಬುದಾಗಿ ಪರಿಗಣಿಸಲಾಯಿತು. ಮುಂದುವರೆದು, ತದನಂತರದಲ್ಲಿ ಈಕ್ವಿಟಿಯನ್ನಾಗಿ ಪರಿವರ್ತಿಸಲಾಗಿರುವಂತಹ ಬಡ್ಡಿರಹಿತ ಸಾಲಗಳ ಪ್ರಕರಣಗಳಲ್ಲಿ, ಯಾವುದಾದರೂ ಇದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಈಕ್ವಿಟಿಯನ್ನಾಗಿ ಪರಿವರ್ತಿಸಲಾದಂತಹ ಸಾಲದ ಮೊತ್ತವನ್ನು ಬಡ್ಡಿರಹಿತ ಸಾಲಗಳ ಮೊತ್ತದಿಂದ ಕಳೆಯಲಾಯಿತು ಹಾಗೂ ಪ್ರಸಕ್ತ ಸಾಲಿನ ಈಕ್ವಿಟಿಗೆ ಸೇರಿಸಲಾಯಿತು. ಅನುದಾನಗಳು/ಸಹಾಯಾನುಧಾನಗಳನ್ನು ಕಾರ್ಯಾಚರಣೆ ಮತ್ತು ಆಡಳಿತ ವೆಚ್ಚಕ್ಕಾಗಿ ನೀಡದಿದ್ದುದರಿಂದ ಮತ್ತು ಹೂಡಿಕೆ ಎಂಬುದಾಗಿ ಪರಿಗಣಿಸುವ ಅರ್ಹತೆಯನ್ನು ಹೊಂದಿರುವುದಿಲ್ಲವಾದ್ದರಿಂದ ಅನುದಾನಗಳು/ಸಹಾಯಾನುಧಾನಗಳ ರೂಪದಲ್ಲಿ ನೀಡಿದ್ದ ಹಣಕಾಸನ್ನು ಹೂಡಿಕೆ ಎಂಬುದಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ.

- ಪ್ರಸಕ್ತ ಮೌಲ್ಯವನ್ನು ಲೆಕ್ಕಹಾಕುವ ಸಲುವಾಗಿ ಸಂಯೋಜಿತ ದರವು ಪ್ರಸಕ್ತ ಸಾಲಿಗೆ ಹಣಕಾಸಿನ ಹೂಡಿಕೆಯ ಕಡೆಗೆ ಸರ್ಕಾರವು ಭರಿಸಿದ ವೆಚ್ಚಗಳನ್ನು ಅದು ಪ್ರತಿನಿಧಿಸುವುದರಿಂದ, ಸಂಬಂಧಿತ ಹಣಕಾಸು ಸಾಲಿಗೆ ಸರ್ಕಾರದ ಸಾಲಗಳ ಮೇಲೆ ಬಡ್ಡಿಯ ಸರಾಸರಿ ದರವನ್ನು ಅಳವಡಿಸಿಕೊಳ್ಳಲಾಯಿತು ಮತ್ತು ಅದ್ದರಿಂದ ಸರ್ಕಾರವು ಮಾಡಿರುವ ಹೂಡಿಕೆಗಳ ಮೇಲೆ ಕನಿಷ್ಠ ನಿರೀಕ್ಷಿತ ದರ ಎಂಬುದಾಗಿ ಪರಿಗಣಿಸಲಾಯಿತು.

**1.10.4**. 2009–10ರವರೆಗೆ ಹಾಗೂ 2010–11ರಿಂದ 2018–19ರ ಅವಧಿಯಲ್ಲಿ ಈಕ್ವಿಟಿ ಮತ್ತು ಬಡ್ಡಿರಹಿತ ಸಾಲಗಳ ರೂಪದಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆಯ ಕಂಪನಿವಾರು ಸ್ಥಿತಿಗತಿಯನ್ನು ***ಅನುಬಂಧ – 5 (ಎ)***ನಲ್ಲಿ ನೀಡಲಾಗಿರುವುದು. ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ರಾಜ್ಯ ಸರ್ಕಾರದ ಹಣಕಾಸಿನ ಪ್ರಸಕ್ತ ಮೌಲ್ಯದ ಕ್ರೋಢೀಕೃತ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.8: 2010–11ರಿಂದ 2018–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿದ ಹಣಕಾಸು ಹಾಗೂ ಅವುಗಳ ಪ್ರಸಕ್ತ ಮೌಲ್ಯದ ವರ್ಷವಾರು ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ವರ್ಷದ ಪ್ರಾರಂಭದಲ್ಲಿ ಹೂಡಿಕೆಯ ಪ್ರಸಕ್ತ ಮೌಲ್ಯ | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿದ ಈಕ್ವಿಟಿ | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ನೀಡಿದ ಬಡ್ಡಿ ರಹಿತ ಸಾಲಗಳು | ವರ್ಷದ ಅಂತ್ಯದಲ್ಲಿ ಒಟ್ಟಾರೆ ಹೂಡಿಕೆ | ಸರ್ಕಾರಿ ಸಾಲಗಳ ಮೇಲಿನ ಸರಾಸರಿ ಬಡ್ಡಿ[25] (ಶೇಕಡಾವಾರು) | ವರ್ಷದ ಅಂತ್ಯದಲ್ಲಿ ಒಟ್ಟಾರೆ ಹೂಡಿಕೆಯ ಪ್ರಸಕ್ತ ಮೌಲ್ಯ | ಪ್ರಸಕ್ತ ಸಾಲಿನ ಹಣಕಾಸಿನ ವೆಚ್ಚವನ್ನು ವಸೂಲಾತಿ ಮಾಡುವ ಸಲುವಾಗಿ ನಿರೀಕ್ಷಿತ ಕನಿಷ್ಠ ಪ್ರತಿಫಲ | ಪ್ರಸಕ್ತ ಸಾಲಿಗೆ ಒಟ್ಟಾರೆ ಗಳಿಕೆಗಳು[26] |
|---|---|---|---|---|---|---|---|---|---|
| (ಎ) | (ಬಿ) | (ಸಿ) | (ಡಿ) | (ಇ) | (ಎಫ್=(ಸಿ+ಡಿ+ಇ)) | (ಜಿ) | (ಹೆಚ್=ಎಫ್×(1+ಜಿ) /100) | (ಐ=ಎಫ್x(ಜಿ/ 100) | (ಜೆ) |
| 1 | 2009–10 ರವರೆಗೆ | – | 4,536.03 | – | 4,536.03 | 6.7 | 4,839.94 | 303.91 | |
| 2 | 2010–11 | 4,839.94 | 1,174.20 | 0.94 | 6,015.08 | 6.4 | 6,400.05 | 384.97 | 593.17 |
| 3 | 2011–12 | 6,400.05 | 1,026.29 | – | 7,426.34 | 6.6 | 7,916.48 | 490.14 | 261.86 |
| 4 | 2012–13 | 7,916.48 | 1,099.93 | – | 9,016.41 | 6.6 | 9,611.49 | 595.08 | 255.66 |
| 5 | 2013–14 | 9,611.49 | 825.31 | – | 10,436.80 | 6.2 | 11,083.88 | 647.08 | –534.58 |
| 6 | 2014–15 | 11,083.88 | 715.17 | – | 11,799.05 | 6.5 | 12,565.99 | 766.94 | 372.62 |
| 7 | 2015–16 | 12,565.99 | 931.96 | – | 13,497.95 | 6.5 | 14,375.32 | 877.37 | 422.64 |
| 8 | 2016–17 | 14,375.32 | 871.80 | – | 15,247.12 | 6.3 | 16,207.69 | 960.57 | 21.29 |
| 9 | 2017–18 | 16,207.69 | 805.77 | – | 17,013.46 | 7.7 | 18,323.50 | 1,310.04 | –39.61 |
| 10 | 2018–19 | 18,323.50 | 580.23 | – | 18,903.73 | 8.2 | 20,453.83 | 1,550.11 | –587.33 |
| | ಒಟ್ಟು | | **12,566.69** | **0.94** | | | | | |

ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರದ ಹೂಡಿಕೆಯ ಶಿಲ್ಕು ರಾಜ್ಯ ಸರ್ಕಾರವು 2010–11ರಿಂದ 2018–19ರ ಅವಧಿಯಲ್ಲಿ ಈಕ್ವಿಟಿ (₹ 8,030.66 ಕೋಟಿ) ಹಾಗೂ ಬಡ್ಡಿರಹಿತ ಸಾಲಗಳ (₹ 0.94 ಕೋಟಿ) ರೂಪದಲ್ಲಿ ಹೆಚ್ಚುವರಿ ಹಣಕಾಸನ್ನು ತೊಡಗಿಸಿದ್ದಿತಾದ್ದರಿಂದ 31 ಮಾರ್ಚ್ 2010ರಲ್ಲಿದ್ದಂತಹ ₹ 4,536.03 ಕೋಟಿಯಿಂದ 2018–19ರಲ್ಲಿ ₹ 12,567.63 ಕೋಟಿಗೆ ವೃದ್ಧಿಯಾಗಿತ್ತು/ಹೆಚ್ಚಳಗೊಂಡಿತ್ತು. ರಾಜ್ಯ ಸರ್ಕಾರವು ಹೂಡಿಕೆ ಮಾಡಿದ್ದ ಹಣಕಾಸಿನ ಪ್ರಸಕ್ತ ಮೌಲ್ಯವು 31 ಮಾರ್ಚ್ 2019ರಲ್ಲಿದ್ದಂತೆ ₹ 20,453.83 ಕೋಟಿ ಆಗಿತ್ತು.

ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಗಳಿಕೆಗಳು 2013–14, 2017–18 ಹಾಗೂ 2018–19ರಲ್ಲಿ ಮಾತ್ರ ನಕಾರಾತ್ಮಕವಾಗಿದ್ದವು ಎಂಬುದನ್ನೂ ಸಹ ಗಮನಿಸಬಹುದು, ಇದು ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಸಾರ್ವಜನಿಕ ವಲಯ ಉದ್ದಿಮೆಗಳು ಸರ್ಕಾರಕ್ಕೆ ಹಣಕಾಸಿನ ವೆಚ್ಚಗಳನ್ನು ವಸೂಲಾತಿ ಮಾಡಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಮುಂದುವರೆದು, 2010–11ನ್ನು ಹೊರತುಪಡಿಸಿ ಉಳಿದ ಸಾಲುಗಳಲ್ಲಿ ಸಕಾರಾತ್ಮಕ ಒಟ್ಟಾರೆ ಗಳಿಕೆಯು ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾದ ಹೂಡಿಕೆಯ ಕಡೆಗೆ ನಿರೀಕ್ಷಿತ ಕನಿಷ್ಠ ಪ್ರತಿಫಲಕ್ಕಿಂತಲೂ ಗಮನಾರ್ಹವಾದ ರೀತಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಉಳಿದಿತ್ತು.

**1.10.5**. ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರವು ಹೂಡಿಕೆ ಮಾಡಿರುವ ಹಣಕಾಸಿನ (ಪ್ರಸಕ್ತ ಮೌಲ್ಯದಲ್ಲಿ) ಮೇಲಿನ ಪ್ರತಿಫಲವು ಈ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭದಾಯಕತೆ ಮತ್ತು ದಕ್ಷತೆಯನ್ನು ಸೂಚಿಸುತ್ತದೆ. ರಾಜ್ಯ ಸರ್ಕಾರದ ಹೂಡಿಕೆಯ ಮೇಲಿನ ಪ್ರತಿಫಲವನ್ನು ಈ ಎಂಟು

[25] ರಾಜ್ಯ ಸರ್ಕಾರದ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರವನ್ನು ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ರಾಜ್ಯ ಹಣಕಾಸಿನ ಸ್ಥಿತಿಗತಿಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳ ಅನುಸಾರ ಅಳವಡಿಸಿಕೊಳ್ಳಲಾಗಿದೆ.

[26] ಪ್ರಸಕ್ತ ಸಾಲಿನ ಒಟ್ಟಾರೆ ಗಳಿಕೆಯು, ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿರುವ ಎಂಟು ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಬಂಧಿತ ವರ್ಷಗಳಿಗೆ ಅವುಗಳ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ನಿವ್ವಳ ಗಳಿಕೆಗಳ (ಲಾಭ/ನಷ್ಟ) ಒಟ್ಟಾರೆ ಅಂಕಿಸಂಖ್ಯೆಯನ್ನು ತೋರಿಸುತ್ತದೆ.

ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ಗಳಿಕೆಗಳನ್ನು[27] ರಾಜ್ಯ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯದಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಯಿತು. 2014–15ರಿಂದ 2018–19ರಲ್ಲಿ, ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳು 2014–15, 2015–16 ಹಾಗೂ 2016–17ರಲ್ಲಿ ಮಾತ್ರ ಸಕಾರಾತ್ಮಕ ಪ್ರತಿಫಲವನ್ನು ಹೊಂದಿದ್ದವು. ಆದ್ದರಿಂದ, ಈ ಮೂರು ವರ್ಷಗಳಿಗೆ ಹೂಡಿಕೆಯ ಮೇಲಿನ ಪ್ರತಿಫಲವನ್ನು ಲೆಕ್ಕಹಾಕಲಾಯಿತು ಹಾಗೂ ಪ್ರಸಕ್ತ ಮೌಲ್ಯದ ಆಧಾರದ ಮೇರೆಗೆ ತೋರಿಸಲಾಯಿತು.

ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸಕಾರಾತ್ಮಕ ಗಳಿಕೆಗಳು ಇದ್ದಂತಹ ಸಮಯದಲ್ಲಿ 2014–15ರಿಂದ 2016–17ರಲ್ಲಿ ಅಂತಹ ಹೂಡಿಕೆಗಳ ಮೂಲ ಮೌಲ್ಯ ಹಾಗೂ ಪ್ರಸಕ್ತ ಮೌಲ್ಯದ ಅನುಸಾರ ಹೂಡಿಕೆಗಳ ಮೇಲಿನ ಪ್ರತಿಫಲದ ಒಂದು ಹೋಲಿಕೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.9: ರಾಜ್ಯ ಸರ್ಕಾರದ ಹಣಕಾಸಿನ ಹೂಡಿಕೆಯ ಮೇಲಿನ ಪ್ರತಿಫಲ**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವರ್ಷ | ಒಟ್ಟಾರೆ ಗಳಿಕೆಗಳು | ಮೂಲ ಮೌಲ್ಯದಲ್ಲಿ ಈಕ್ವಿಟಿ ಮತ್ತು ಬಡ್ಡಿ ರಹಿತ ಸಾಲಗಳ ರೂಪದಲ್ಲಿ ಹೂಡಿಕೆ | ಮೂಲ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಯ ಮೇಲಿನ ಪ್ರತಿಫಲ (ಶೇಕಡಾವಾರು) | ವರ್ಷದ ಅಂತ್ಯದಲ್ಲಿ ರಾಜ್ಯ ಸರ್ಕಾರದ ಹಣಕಾಸಿನ ಪ್ರಸಕ್ತ ಮೌಲ್ಯ | ಪ್ರಸಕ್ತ ಮೌಲ್ಯದ ಆಧಾರದ ಮೇರೆಗೆ ಹೂಡಿಕೆಗಳ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|---|---|
| 1 | 2014–15 | 372.62 | 9,377.87 | 3.97 | 12,565.99 | 2.97 |
| 2 | 2015–16 | 422.64 | 10,309.83 | 4.10 | 14,375.32 | 2.94 |
| 3 | 2016–17 | 21.29 | 11,181.63 | 0.19 | 16,207.69 | 0.13 |

2014–15ರಿಂದ 2016–17ರಲ್ಲಿ ಪ್ರಸಕ್ತ ಮೌಲ್ಯದ ಆಧಾರದ ಮೇರೆಗಿನ ಪ್ರತಿಫಲಗಳು ಮೂಲ ಮೌಲ್ಯ ಆಧಾರದ ಪ್ರತಿಫಲಗಳಿಗಿಂತ ಕಡಿಮೆ ಪ್ರಮಾಣದಲ್ಲಿದ್ದವು. 2014–15ರಿಂದ 2016–17ರಲ್ಲಿ ಮೂಲ ಮೌಲ್ಯ ಆಧಾರದ ಪ್ರತಿಫಲಗಳು ಶೇಕಡಾ 0.19ರಿಂದ ಶೇಕಡಾ 4.10ರವರೆಗೆ ಆಗಿತ್ತಾದಲ್ಲಿ ಪ್ರಸಕ್ತ ಮೌಲ್ಯದ ಆಧಾರದ ಮೇರೆಗಿನ ಪ್ರತಿಫಲಗಳು ಅದೇ ಅವಧಿಯಲ್ಲಿ ಶೇಕಡಾ 0.13ರಿಂದ ಶೇಕಡಾ 2.97ರವರೆಗೆ ಆಗಿತ್ತು. ಮುಂದುವರೆದು, ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು 2017–18ರಲ್ಲಿ ₹ 39.61 ಕೋಟಿ ಮೊತ್ತದಷ್ಟು ಹಾಗೂ 2018–19ರಲ್ಲಿ ₹ 587.33 ಕೋಟಿ ಮೊತ್ತದಷ್ಟು ಒಟ್ಟಾರೆ ನಷ್ಟಗಳನ್ನು ಭರಿಸಿದ್ದವು

***ನಿವ್ವಳ ಆಸ್ತಿಯ ಮೌಲ್ಯದ (ನೆಟ್ ವರ್ತ್) ಸವೆತ***

**1.10.6.** ನಿವ್ವಳ ಆಸ್ತಿಯ ಮೌಲ್ಯವು ಒಂದು ಸಂಸ್ಥೆಯ ಮಾಲೀಕರಿಗೆ ತಮ್ಮ ಸಂಸ್ಥೆಯ ಮೌಲ್ಯವನ್ನು ತಿಳಿಸುತ್ತದೆ. ಒಂದು ನಕಾರಾತ್ಮಕ (–) ನಿವ್ವಳ ಆಸ್ತಿಯ ಮೌಲ್ಯವು ಸಂಪೂರ್ಣ ಹೂಡಿಕೆಯು ಕ್ರೋಡೀಕೃತ ನಷ್ಟಗಳಿಂದ ಅಳಿಸಿಹೋಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಕರ್ನಾಟಕ ಸರ್ಕಾರವು 2014–15ರಿಂದ 2018–19ರ ಅವಧಿಯಲ್ಲಿ ಹಣಕಾಸನ್ನು ಹೂಡಿಕೆ ಮಾಡಿದ್ದ ವಿದ್ಯುತ್ ವಲಯಕ್ಕೆ ಸಂಬಂಧಿತ ಎಲ್ಲಾ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳ ನಿವ್ವಳ ಆಸ್ತಿಯ ಮೌಲ್ಯವನ್ನು (ನೆಟ್ ವರ್ತ್)[28] ಅವುಗಳ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ:

---

[27] ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲ್ಪಟ್ಟಿರುವ ಲೆಕ್ಕಪತ್ರಗಳ ಅನುಸಾರ ರಾಜ್ಯ ಸರ್ಕಾರದಿಂದ ಹಣಕಾಸನ್ನು ಹೂಡಿಕೆ ಮಾಡಲ್ಪಟ್ಟಿರುವ ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ನಿವ್ವಳ ಲಾಭ/ನಷ್ಟಗಳನ್ನು ಒಳಗೊಂಡಿರುತ್ತದೆ.

[28] ಪಾವತಿಸಲ್ಪಟ್ಟಿರುವ ಬಂಡವಾಳ ಇದಕ್ಕೆ ಮುಕ್ತ ಮೀಸಲಿರಿಸಿರುವಿಕೆಗಳನ್ನು *ಕೂಡುವುದು* ಇವುಗಳ ಮೊತ್ತದಿಂದ ಸಂಚಿತ ನಷ್ಟವನ್ನು *ಕಳೆಯುವುದರಿಂದ* ಬರುವ ನಿವ್ವಳ ಮೊತ್ತ.

**ಕೋಷ್ಟಕ ಸಂಖ್ಯೆ 1.10: 2014–15ರಿಂದ 2018–19ರ ಅವಧಿಯಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ನಿವ್ವಳ ಆಸ್ತಿಯ ಮೌಲ್ಯ**

***(₹ ಕೋಟಿಯಲ್ಲಿ)***

| ಕ್ರಮ ಸಂಖ್ಯೆ | ವರ್ಷ | ಪಾವತಿಸಲ್ಪಟ್ಟಿರುವ ಬಂಡವಾಳ | ವರ್ಷದ ಅಂತ್ಯದಲ್ಲಿ ಸಂಚಿತ ಲಾಭ (+)/ನಷ್ಟ (–) | ನಿವ್ವಳ ಆಸ್ತಿಯ ಮೌಲ್ಯ |
|---|---|---|---|---|
| 1 | 2014–15 | 8,317.67 | 5,256.71 | 13,574.38 |
| 2 | 2015–16 | 8,756.79 | 2,068.61 | 10,825.40 |
| 3 | 2016–17 | 9,075.46 | 1,622.15 | 10,697.61 |
| 4 | 2017–18 | 10,565.94 | 2,903.76 | 13,469.70 |
| 5 | 2018–19 | 11,538.58 | 3,312.77 | 14,851.35 |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ನಿವ್ವಳ ಆಸ್ತಿಯ ಮೌಲ್ಯವು 2018–19ಕ್ಕೆ ಅಂತ್ಯಗೊಂಡಂತಹ ಕಳೆದ ಐದು ಸಾಲುಗಳಲ್ಲಿ ಸಕಾರಾತ್ಮಕವಾಗಿತ್ತು. ಆದಾಗ್ಯೂ, ವಿದ್ಯುತ್ ವಲಯಕ್ಕೆ ಸಂಬಂಧಿತ ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಎರಡು[29] ಉದ್ದಿಮೆಗಳ ನಿವ್ವಳ ಆಸ್ತಿಯ ಮೌಲ್ಯವು 31 ಮಾರ್ಚ್ 2019ರಲ್ಲಿದ್ದಂತೆ ಅಳಿಸಿಹೋಗಿತ್ತು.

***ಷೇರು ಲಾಭಾಂಶ (ಡಿವಿಡೆಂಡ್) ಪಾವತಿ***

**1.10.7.** ರಾಜ್ಯ ಸರ್ಕಾರವು ಮಾರ್ಗಸೂಚಿಗಳನ್ನು ರೂಪಿಸಿತು (ಮೇ 2003), ಅಂತಹ ಮಾರ್ಗಸೂಚಿಗಳ ಅನುಸಾರ, ರಾಜ್ಯ ಸರ್ಕಾರವು ಈಕ್ವಿಟಿಯನ್ನು ಹೊಂದಿರುವಂತಹ ಸಾರ್ವಜನಿಕ ಉದ್ದಿಮೆಗಳು ಅಥವಾ ಜಂಟಿ ಸಾಹಸೋದ್ಯಮಗಳ ನಿರ್ದೇಶಕರುಗಳ ಮಂಡಳಿಯಲ್ಲಿ ಇರುವಂತಹ ಸರ್ಕಾರಿ ನಾಮನಿರ್ದೇಶಿತರುಗಳು ಷೇರು ಹಿಡುವಳಿಗಳ ಮೇಲೆ ಕನಿಷ್ಠ ಶೇಕಡಾ 20ರಷ್ಟು ಷೇರು ಲಾಭಾಂಶವನ್ನು ಘೋಷಿಸುವಂತೆ ಒತ್ತಾಯಿಸತಕ್ಕದ್ದು. ಅಷ್ಟರಮಟ್ಟಿಗೆ ಷೇರು ಲಾಭಾಂಶವನ್ನು ಪಾವತಿಸಲು ಸಾಧ್ಯವಾಗುವುದಿಲ್ಲವಾದಲ್ಲಿ, ಷೇರು ಲಾಭಾಂಶ ಪಾವತಿಯು ಕನಿಷ್ಠ ಪಕ್ಷ ತೆರಿಗೆ ಪಾವತಿಯ ನಂತರ ಸಿಗುವ ಲಾಭದ ಮೊತ್ತದ ಶೇಕಡಾ 20ರಷ್ಟು ಆಗಿರತಕ್ಕದ್ದು. ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2014–15ರಿಂದ 2018–19ರ ಅವಧಿಯಲ್ಲಿ ಷೇರು ಲಾಭಾಂಶ ಪಾವತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 1.11: 2014–15ರಿಂದ 2018–19ರ ಅವಧಿಯಲ್ಲಿ ಷೇರು ಲಾಭಾಂಶ ಪಾವತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಕರ್ನಾಟಕ ಸರ್ಕಾರವು ಈಕ್ವಿಟಿಯನ್ನು ಹೂಡಿಕೆ ಮಾಡಿದ ಒಟ್ಟಾರೆ ಸಾರ್ವಜನಿಕ ವಲಯ ಉದ್ದಿಮೆಗಳು | | ಪ್ರಸಕ್ತ ಸಾಲಿನಲ್ಲಿ ಲಾಭವನ್ನು ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳು | | ಪ್ರಸಕ್ತ ಸಾಲಿನಲ್ಲಿ ಷೇರು ಲಾಭಾಂಶವನ್ನು ಘೋಷಿಸಿದ ಸಾರ್ವಜನಿಕ ವಲಯ ಉದ್ದಿಮೆಗಳು | | ಪಾವತಿಸಲ್ಪಟ್ಟಿರುವ ಬಂಡವಾಳದ ಒಂದು ಶೇಕಡಾವಾರಿನಂತೆ ಷೇರು ಲಾಭಾಂಶದ ಪಾವತಿ |
|---|---|---|---|---|---|---|---|---|
| | | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪಾವತಿಸಲ್ಪಟ್ಟಿರುವ ಬಂಡವಾ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪಾವತಿಸಲ್ಪಟ್ಟಿರುವ ಬಂಡವಾಳ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳು ಘೋಷಿಸಿದ್ದ ಷೇರು ಲಾಭಾಂಶ | |
| | (1) | (2) | (3) | (4) | (5) | (6) | (7) | (8=7/5*100) |
| 1 | 2014–15 | 8 | 8,317.67 | 8 | 8,317.67 | 1 | 41.41 | 0.50 |
| 2 | 2015–16 | 8 | 8,756.79 | 7 | 8,451.65 | 1 | 43.46 | 0.51 |
| 3 | 2016–17 | 8 | 9,075.46 | 6 | 7,835.83 | 1 | 47.69 | 0.61 |
| 4 | 2017–18 | 8 | 10,565.94 | 6 | 8,578.10 | ಯಾವುದೂ ಇರುವುದಿಲ್ಲ | – | – |
| 5 | 2018–19 | 8 | 11,538.58 | 5 | 4,765.80 | ಯಾವುದೂ ಇರುವುದಿಲ್ಲ | – | – |

[29] ಹೆಸ್ಕಾಂ (₹ –401.53 ಕೋಟಿ) ಹಾಗೂ ಜೆಸ್ಕಾಂ (₹ –234.62 ಕೋಟಿ).

2014–15ರಿಂದ 2018–19ರ ಅವಧಿಯಲ್ಲಿ, ಲಾಭವನ್ನು ಗಳಿಸಿದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಐದರಿಂದ ಎಂಟು ಆಗಿದ್ದವು, ಅವುಗಳ ಪೈಕಿ 2014–15ರಲ್ಲಿ ಕೇವಲ ಒಂದು ಸಾರ್ವಜನಿಕ ವಲಯ ಉದ್ದಿಮೆಯು (ಕರ್ನಾಟಕ ವಿದ್ಯುತ್ ನಿಗಮ ನಿಯಮಿತ) ಕರ್ನಾಟಕ ಸರ್ಕಾರಕ್ಕೆ ಷೇರು ಲಾಭಾಂಶವನ್ನು ಘೋಷಿಸಿದ್ದವು. 2017–18ರಲ್ಲಿ, ಆರು ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು 2018–19ರಲ್ಲಿ ಐದು ಸಾರ್ವಜನಿಕ ವಲಯ ಉದ್ದಿಮೆಗಳು ಲಾಭವನ್ನು ಗಳಿಸಿದ್ದವಾದರೂ, ಯಾವುದೇ ಸಾರ್ವಜನಿಕ ವಲಯ ಉದ್ದಿಮೆಯೂ ಷೇರು ಲಾಭಾಂಶವನ್ನು ಘೋಷಿಸಿರಲಿಲ್ಲ. ಮುಂದುವರೆದು, 2014–15ರಿಂದ 2016–17ರಲ್ಲಿ ಷೇರು ಲಾಭಾಂಶ ಪಾವತಿಯ ಅನುಪಾತವು ನಾಮಮಾತ್ರದ್ದಾಗಿತ್ತು, ಅದು ಪಾವತಿಸಲ್ಪಟ್ಟ ಷೇರು ಬಂಡವಾಳದ ಶೇಕಡಾ 0.50ರಿಂದ ಶೇಕಡಾ 0.61ರಷ್ಟು ಆಗಿತ್ತು.

***ಈಕ್ವಿಟಿಯ ಮೇಲಿನ ಪ್ರತಿಫಲ***

**1.10.8.** ಈಕ್ವಿಟಿಯ ಮೇಲಿನ ಪ್ರತಿಫಲವು ವ್ಯವಸ್ಥಾಪನೆಯು ಲಾಭವನ್ನು ಗಳಿಸುವ ಸಲುವಾಗಿ ಕಂಪನಿಯ ಆಸ್ತಿಗಳನ್ನು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ ಎಂಬುದನ್ನು ನಿರ್ಧಾರಣೆ ಮಾಡುವ ಸಲುವಾಗಿ ಹಣಕಾಸಿನ ಕಾರ್ಯನಿರ್ವಹಣೆಯ ಒಂದು ಅಳತೆಯಾಗಿರುತ್ತದೆ ಹಾಗೂ ತೆರಿಗೆಗಳನ್ನು ಪಾವತಿಸಿದನಂತರದ ನಿವ್ವಳ ಲಾಭವನ್ನು ಷೇರುದಾರರುಗಳ ಹಣಕಾಸಿನಿಂದ[30] ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು.

ರಾಜ್ಯ ಸರ್ಕಾರವು ಹಣಕಾಸನ್ನು ನೇರವಾಗಿ ಹೂಡಿಕೆ ಮಾಡಿರುವ ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈಕ್ವಿಟಿಯ ಮೇಲಿನ ಪ್ರತಿಫಲವನ್ನು ಲೆಕ್ಕಹಾಕಲಾಯಿತು. ಈ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2014–15ರಿಂದ 2018–19ರ ಅವಧಿಯಲ್ಲಿ ಷೇರುದಾರರ ಹಣಕಾಸು ಹಾಗೂ ಈಕ್ವಿಟಿಯ ಮೇಲಿನ ಪ್ರತಿಫಲದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 1.12: ವಿದ್ಯುತ್ ವಲಯಕ್ಕೆ ಸಂಬಂಧಿಸಿದ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈಕ್ವಿಟಿಯ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ನಿವ್ವಳ ಲಾಭ (₹ ಕೋಟಿಯಲ್ಲಿ) | ಷೇರುದಾರರುಗಳ ಹಣಕಾಸು/ನಿಧಿ (₹ ಕೋಟಿಯಲ್ಲಿ) | ಈಕ್ವಿಟಿಯ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| 1 | 2014–15 | 372.62 | 13,574.38 | 2.75 |
| 2 | 2015–16 | 422.64 | 10,825.40 | 3.90 |
| 3 | 2016–17 | 21.29 | 10,697.61 | 0.20 |
| 4 | 2017–18 | –39.61 | 13,469.70 | – |
| 5 | 2018–19 | –587.33 | 14,851.35 | – |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಕೇವಲ 2014–15ರಿಂದ 2016–17ರಲ್ಲಿ ಮಾತ್ರ ಲಾಭವನ್ನು ಗಳಿಸಿದ್ದವು. 2014–15ರಿಂದ 2016–17ರಲ್ಲಿ ಈಕ್ವಿಟಿಯ ಮೇಲಿನ ಪ್ರತಿಫಲವು ಬಹಳಷ್ಟಾಗಿ ನಾಮಮಾತ್ರದ್ದಾಗಿತ್ತು ಹಾಗೂ ಅದು ಶೇಕಡಾ 0.20ಯಿಂದ ಶೇಕಡಾ 3.90ರವರೆಗೆ ಆಗಿತ್ತು. ಮುಂದುವರಿದು, 2017–18 ಹಾಗು 2018–19ರಲ್ಲಿ ನಷ್ಟಗಳಿದ್ದುದರಿಂದ ಈಕ್ವಿಟಿಯ ಮೇಲಿನ ಪ್ರತಿಫಲವು ಇರಲಿಲ್ಲ.

***ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ***

**1.10.9.** ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲವು ಬಂಡವಾಳವನ್ನು ತೊಡಗಿಸಲಾದ ಕಂಪನಿಯ ಲಾಭದಾಯಕತೆ ಹಾಗೂ ದಕ್ಷತೆಯನ್ನು ಅಳೆಯುವ ಒಂದು ಅನುಪಾತವಾಗಿರುತ್ತದೆ. ಬಡ್ಡಿ ಹಾಗೂ ತೆರಿಗೆಗಳ ಪಾವತಿಗೆ ಮುಂಚಿನ ಒಂದು ಕಂಪನಿಯ ಗಳಿಕೆಗಳನ್ನು ತೊಡಗಿಸಲಾಗಿರುವ

[30] ಷೇರುದಾರರುಗಳ ಹಣಕಾಸು = ಪಾವತಿಸಲ್ಪಟ್ಟಿರುವ ಬಂಡವಾಳಕ್ಕೆ ಮುಕ್ತ ಮೀಸಲಿರಿಸಿರುವಿಕೆಗಳನ್ನು ಸೇರಿಸಿ ಅದರಿಂದ ಸಂಚಿತ ನಷ್ಟವನ್ನು ಕಳೆಯುವುದರ ಮೂಲಕ ಲೆಕ್ಕಹಾಕಲಾದ ಮೊತ್ತ.

ಬಂಡವಾಳದಿಂದ[31] ಭಾಗಿಸುವ ಮೂಲಕ ಹೂಡಿಕೆ ಮಾಡಲಾದ ಬಂಡವಾಳದ ಮೇಲಿನ ಪ್ರತಿಫಲವನ್ನು ಲೆಕ್ಕಹಾಕಲಾಗುವುದು. 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯ ಸರ್ಕಾರವು ಹಣಕಾಸನ್ನು ತೊಡಗಿಸಿದ್ದ ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.13: ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ಬಡ್ಡಿ ಹಾಗೂ ತೆರಿಗೆಗಳ ಪಾವತಿಗೆ ಮುಂಚಿನ ಗಳಿಕೆಗಳು (₹ ಕೋಟಿಯಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳ (₹ ಕೋಟಿಯಲ್ಲಿ) | ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|
| 1 | 2014–15 | 3,223.86 | 27,962.84 | 11.53 |
| 2 | 2015–16 | 3,501.48 | 27,331.82 | 12.81 |
| 3 | 2016–17 | 3,622.95 | 29,062.90 | 12.47 |
| 4 | 2017–18 | 4,534.91 | 33,845.15 | 13.40 |
| 5 | 2018–19 | 4,591.09 | 37,903.06 | 12.11 |

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೇಲಿನ ಪ್ರತಿಫಲವು 2014–15ರಿಂದ 2017–18ರ ಅವಧಿಯಲ್ಲಿ ಶೇಕಡಾ 11.53ರಿಂದ ಶೇಕಡಾ 13.40ಗೆ ಹೆಚ್ಚಳಗೊಂಡಿತ್ತು ಮತ್ತು 2018–19ರಲ್ಲಿ ಶೇಕಡಾ 12.11ರಷ್ಟು ಇಳಿಮುಖಗೊಂಡಿತ್ತು.

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ದೀರ್ಘಾವಧಿ ಸಾಲಗಳ ವಿಶ್ಲೇಷಣೆ

**1.11.** ಸರ್ಕಾರ, ಬ್ಯಾಂಕುಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳಿಗೆ ಪಾವತಿಸಲು ಬಾಕಿಯಿದ್ದಂತಹ ಸಾಲಗಳ ಮೇಲಿನ ಬಡ್ಡಿಗಳನ್ನು ಪಾವತಿ ಮಾಡುವಲ್ಲಿ ಕಂಪನಿಗಳ ಸಾಮರ್ಥ್ಯವನ್ನು ನಿರ್ಧಾರಣೆ ಮಾಡಲು 2014–15ರಿಂದ 2018–19ರಲ್ಲಿ ಹೂಡಿಕೆ ಮಾಡಲಾದ ಕಂಪನಿಗಳ ದೀರ್ಘಾವಧಿ ಸಾಲಗಳ ವಿಶ್ಲೇಷಣೆಯನ್ನು ನಡೆಸಲಾಯಿತು. ಇದನ್ನು ಬಡ್ಡಿ ವ್ಯಾಪ್ತಿ ಅನುಪಾತ ಹಾಗೂ ಋಣ/ಸಾಲ ವಹಿವಾಟು ಅನುಪಾತದ ಮೂಲಕ ನಿರ್ಧಾರಣೆ ಮಾಡಲಾಯಿತು.

### *ಬಡ್ಡಿ ವ್ಯಾಪ್ತಿ ಅನುಪಾತ*

**1.11.1** ಬಡ್ಡಿ ವ್ಯಾಪ್ತಿ ಅನುಪಾತವನ್ನು ಬಾಕಿಯಿರುವ ಸಾಲದ ಮೇಲೆ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಗೆ ಇರುವ ಸಾಮರ್ಥ್ಯವನ್ನು ನಿರ್ಧಾರಣೆ ಮಾಡುವ ಸಲುವಾಗಿ ಬಳಸಲಾಗುವುದು ಹಾಗೂ ಬಡ್ಡಿ ಮತ್ತು ತೆರಿಗೆಗಳ ಪಾವತಿಗೆ ಮುಂಚಿನ ಕಂಪನಿಯ ಗಳಿಕೆಗಳನ್ನು ಅದೇ ಅವಧಿಯ ಬಡ್ಡಿ ವೆಚ್ಚಗಳಿಂದ ಭಾಗಿಸುವ ಮೂಲಕ ಲೆಕ್ಕಹಾಕಲಾಗುವುದು. ಅನುಪಾತವು ಕಡಿಮೆ ಪ್ರಮಾಣದಲ್ಲಿದ್ದಲ್ಲಿ, ಸಾಲಗಳ ಮೇಲಿನ ಬಡಿಯನ್ನು ಪಾವತಿಸುವಲ್ಲಿ ಕಂಪನಿಯ ಸಾಮರ್ಥ್ಯವು ಕಡಿಮೆ ಪ್ರಮಾಣದಲ್ಲಿರುತ್ತದೆ. ಒಂದಕ್ಕಿಂತ ಕಡಿಮೆ ಪ್ರಮಾಣದಲ್ಲಿನ ಬಡ್ಡಿ ಪಾವತಿ ಅನುಪಾತವು ಕಂಪನಿಯು ಬಡ್ಡಿ ಪಾವತಿಯ ಮೇಲೆ ತನ್ನ ವೆಚ್ಚಗಳನ್ನು ಭರಿಸಲು ಸಮರ್ಪಕ ವರಮಾನವನ್ನು ಉತ್ಪಾದಿಸುತ್ತಿರುವುದಿಲ್ಲ ಎಂಬುದನ್ನು ಸೂಚಿಸುತ್ತದೆ. 2014–15ರಿಂದ 2018–19ರ ಅವಧಿಯಲ್ಲಿ ಬಡ್ಡಿ ಪಾವತಿ ಹೊರೆಯನ್ನು ಹೊಂದಿದ್ದಂತಹ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಬಡ್ಡಿ ವ್ಯಾಪ್ತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

[31] ತೊಡಗಿಸಲಾಗಿರುವ ಬಂಡವಾಳ = ಪಾವತಿಸಲ್ಪಟ್ಟಿರುವ ಬಂಡವಾಳ, ಇದಕ್ಕೆ ಮುಕ್ತ ಮೀಸಲಿಸಿರಿವಿಕೆಗಳು ಹಾಗೂ ಮಿಗುತಾಯಗಳನ್ನು *ಕೂಡುವುದು* ಹಾಗೂ ಇದಕ್ಕೆ ದೀರ್ಘಾವಧಿ ಸಾಲಗಳನ್ನು *ಕೂಡುವುದು*, ಇದರಿಂದ ಸಂಚಿತ ನಷ್ಟವನ್ನು *ಕಳೆಯುವುದು*.

**ಕೋಷ್ಟಕ ಸಂಖ್ಯೆ 1.14: ಬಡ್ಡಿ ವ್ಯಾಪ್ತಿ ಅನುಪಾತ**

| ಕ್ರಮ ಸಂಖ್ಯೆ | ವರ್ಷ | ಬಡ್ಡಿ (₹ ಕೋಟಿಯಲ್ಲಿ) | ಬಡ್ಡಿ ಮತ್ತು ತೆರಿಗೆಗಳ ಪಾವತಿಗೆ ಮುಂಚಿನ ಕಂಪನಿಯ ಗಳಿಕೆ (₹ ಕೋಟಿಯಲ್ಲಿ) | ಬಡ್ಡಿ ಪಾವತಿ ಹೊರೆಯನ್ನು ಹೊಂದಿರುವ ಕಂಪನಿಗಳ ಸಂಖ್ಯೆ | ಒಂದಕ್ಕಿಂತ ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿರುವ ಕಂಪನಿಗಳ ಸಂಖ್ಯೆ | ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿರುವ ಕಂಪನಿಗಳ ಸಂಖ್ಯೆ |
|---|---|---|---|---|---|---|
| 1 | 2014–15 | 2,750.02 | 3,223.86 | 8 | 8 | 0 |
| 2 | 2015–16 | 2,885.20 | 3,501.48 | 8 | 7 | 1 |
| 3 | 2016–17 | 3,320.65 | 3,622.95 | 8 | 6 | 2 |
| 4 | 2017–18 | 3,767.37 | 4,534.91 | 7 | 5 | 2 |
| 5 | 2018–19 | 4,106.18 | 4,591.09 | 7 | 4 | 3 |

ಒಂದಕ್ಕಿಂತ ಹೆಚ್ಚಿನ ಬಡ್ಡಿ ವ್ಯಾಪ್ತಿ ಅನುಪಾತದೊಂದಿಗಿನ ವಿದ್ಯುತ್ ವಲಯ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಯು 2014–15ರಿಂದ 2018–19ರಲ್ಲಿ ಎಂಟರಿಂದ ನಾಲ್ಕಕ್ಕೆ ಇಳಿಕೆಯಾಗಿದ್ದವು ಎಂಬುದನ್ನು ಗಮನಿಸಲಾಯಿತು. 31 ಮಾರ್ಚ್ 2019ರಲ್ಲಿದ್ದಂತೆ, ವಿದ್ಯುತ್ ವಲಯ ಸಂಬಂಧಿತ ಮೂರು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಸಿಎಲ್, ಸೆಸ್ಕ್ ಮತ್ತು ಜೆಸ್ಕಾಂ) ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿದ್ದವು.

***ಸಾಲ–ಋಣ ವಹಿವಾಟು ಅನುಪಾತ***

**1.11.2.** ಸಾಲ/ಋಣ ವಹಿವಾಟು ಅನುಪಾತವನ್ನು ಬಾಕಿಯಿರುವಂತಹ ಸಾಲಗಳನ್ನು ವರ್ಷದ ಅಂತ್ಯದಲ್ಲಿನ ವಹಿವಾಟಿನಿಂದ ಭಾಗಿಸುವುದರ ಮೂಲಕ ಲೆಕ್ಕಹಾಕಲಾಗಿದೆ. 2014–15ರಿಂದ 2018–19ರಲ್ಲಿ ವಹಿವಾಟಿನ ಸಂಯೋಜಿತ ವಾರ್ಷಿಕ ಬೆಳವಣಿಗೆಯು[32] (ಶೇಕಡಾ 9.23) ಸಾಲ/ಋಣದ ಸಂಯೋಜಿತ ವಾರ್ಷಿಕ ಬೆಳವಣಿಗೆಗಿಂತ (ಶೇಕಡಾ 10.46) ಕಡಿಮೆ ಇದ್ದುದ್ದರಿಂದ ವಿದ್ಯುತ್ ವಲಯಕ್ಕೆ ಸಂಬಂಧಿತ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳ ಸಾಲ/ಋಣ ವಹಿವಾಟು ಅನುಪಾತವು ಉತ್ತಮಗೊಂಡಿರಲಿಲ್ಲ. ಕಳೆದ ಐದು ವರ್ಷಗಳಲ್ಲಿ ಕಾರ್ಯನಿರತ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಾಲ/ಋಣ ವಹಿವಾಟು ಅನುಪಾತವನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 1.15: ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಸಾಲ/ಋಣ ವಹಿವಾಟು ಅನುಪಾತ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2014–15 | 2015–16 | 2016–17 | 2017–18 | 2018–19 |
|---|---|---|---|---|---|---|
| 1 | ಸಾಲ/ಋಣ | 15,486.71 | 16,506.42 | 18,365.29 | 20,375.45 | 23,051.71 |
| 2 | ವಹಿವಾಟು | 34,887.24 | 38,372.52 | 41,284.37 | 45,591.36 | 49,672.22 |
| 3 | ಸಾಲ/ಋಣ ವಹಿವಾಟು ಅನುಪಾತ | 0.44:1 | 0.43:1 | 0.44:1 | 0.45:1 | 0.46:1 |

## ಉಜ್ವಲ ಡಿಸ್ಕಾಂ ಭರವಸೆ ಯೋಜನೆ (ಯುಡಿಎವೈ) ಅಡಿಯಲ್ಲಿ ಸಹಾಯ

**1.12.** ಭಾರತ ಸರ್ಕಾರದ ಇಂಧನ/ವಿದ್ಯುತ್ ಮಂತ್ರಾಲಯವು ರಾಜ್ಯ ಸರ್ಕಾರದ ಮಾಲಿಕತ್ವದಲ್ಲಿನ ವಿದ್ಯುತ್ ವಿತರಣಾ ಕಂಪನಿಗಳ (ಡಿಸ್ಕಾಂಗಳು) ಕಾರ್ಯಾಚರಣೆ ಹಾಗೂ ಹಣಕಾಸು ವ್ಯವಹಾರಗಳ ತಿರುವಿಗಾಗಿ ಉಜ್ವಲ ಡಿಸ್ಕಾಂ ಭರವಸೆ ಯೋಜನೆಯನ್ನು ಪ್ರಾರಂಭಿಸಿತು (20 ನವಂಬರ್ 2015). ಭಾರತ ಸರ್ಕಾರದ ಇಂಧನ/ವಿದ್ಯುತ್ ಮಂತ್ರಾಲಯ, ಕರ್ನಾಟಕ ಸರ್ಕಾರ ಹಾಗೂ ಐದು ವಿದ್ಯುತ್ ವಿತರಣಾ ಕಂಪನಿಗಳ ನಡುವೆ ಮಾಡಿಕೊಳ್ಳಲಾದಂತಹ (ಜೂನ್ 2016) ಪರಸ್ಪರ ತಿಳಿವಳಿಕೆ ಪತ್ರದ ಅನುಸಾರ ರಾಜ್ಯ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯಾಚರಣೆಯ ದಕ್ಷತೆಯನ್ನು

[32] ಈ ರೀತಿ ಲೆಕ್ಕ ಹಾಕಲಾಗಿದೆ: $[1(23{,}051.71/15{,}486.71)^{1/1\times4} - 1] \times 100$ = ಸಾಲಕ್ಕೆ ಶೇಕಡಾ 10.46 ಮತ್ತು $[1(49{,}672.22/34{,}887.24)^{1/1\times4} - 1] \times 100$ = ವಹಿವಾಟಿಗೆ ಶೇಕಡಾ 9.23.

ಉತ್ತಮಗೊಳಿಸುವ ಸಲುವಾಗಿ ಈ ಕೆಳಗಿನ ಕ್ರಮಗಳನ್ನು ಕಾರ್ಯಗತಗೊಳಿಸುವ ಅಗತ್ಯತೆಯಿತ್ತು.

***ಕಾರ್ಯಾಚರಣೆಯ ದಕ್ಷತೆಯನ್ನು ಉತ್ತಮಗೊಳಿಸುವ ಸಲುವಾಗಿ ಯೋಜನೆ***

**1.12.1**. ರಾಜ್ಯವು, ಕಡ್ಡಾಯ ಫೀಡರು ಮತ್ತು ವಿತರಣಾ ಟ್ರಾನ್ಸ್‌ಫರ್ಮರ್ ಮೀಟರುಗಳನ್ನು ಅಳವಡಿಸುವುದು, ಬಳಕೆದಾರರ ಸೂಚಕ ಪಟ್ಟಿಯನ್ನು ತಯಾರಿಸುವುದು ಹಾಗೂ ನಷ್ಟಗಳ ಜಿಐಎಸ್ ನಕಾಶೆಯನ್ನು ತಯಾರಿಸುವುದು, ಟ್ರಾನ್ಸ್‌ಫಾರ್ಮರ್‌ಗಳು ಮತ್ತು ಮೀಟರುಗಳನ್ನು ಮೇಲ್ದರ್ಜೆಗೇರಿಸುವುದು ಅಥವಾ ಬದಲಾಯಿಸುವುದು, ತಿಂಗಳು ಒಂದಕ್ಕೆ 500 ಯೂನಿಟ್ಟುಗಳಿಗೂ ಮೀರಿದಂತೆ ವಿದ್ಯುತ್ ಬಳಸುವ ಎಲ್ಲಾ ಬಳಕೆದಾರರುಗಳಿಗೆ ಸಂಬಂಧಿಸಿದಂತೆ ಸ್ಮಾರ್ಟ್ ಮೀಟರುಗಳನ್ನು ಅಳವಡಿಸುವುದು, ವಿದ್ಯುತ್ ದಕ್ಷತೆ ಉಪಕರಣಗಳ ಮೂಲಕ ಬೇಡಿಕೆ ಭಾಗದ ನಿರ್ವಹಣೆ, ನಿಯತಕಾಲಿಕ ವಿದ್ಯುತ್ ದರಪಟ್ಟಿ ಪರಿಷ್ಕರಣೆ/ಹೆಚ್ಚಳ, ವಿದ್ಯುತ್ ಕಳ್ಳತನವನ್ನು ತಡೆಯುವ ಸಲುವಾಗಿ ಸಮಗ್ರ ಐಇಸಿ ಪ್ರಚಾರ, ಕಾರ್ಯಾಚರಣೆಯ ದಕ್ಷತೆಗಳನ್ನು ಉತ್ತಮಗೊಳಿಸುವ ಸಲುವಾಗಿ ಸಮಗ್ರ ತಾಂತ್ರಿಕ ಮತ್ತು ವಾಣಿಜ್ಯೀಯ (ಎಟಿ ಅಂಡ್ ಸಿ) ನಷ್ಟಗಳನ್ನು ಇಳಿಮುಖಗೊಳಿಸಿರುವಂತಹ ಕ್ಷೇತ್ರಗಳಲ್ಲಿ ಭರವಸೆಯಿಂದ ಕೂಡಿದ ವೃದ್ಧಿಸಲ್ಪಟ್ಟ ವಿದ್ಯುತ್ ಸರಬರಾಜು, ಇವೇ ಮುಂತಾದ ವಿವಿಧ ಗುರಿಯಾಗಿಸಿಕೊಳ್ಳಲ್ಪಟ್ಟಿರುವ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಂಡಿರುವುದು.

ಫೀಡರುಗಳಲ್ಲಿ ಮತ್ತು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ನಷ್ಟಗಳನ್ನು ಪತ್ತೆಹಚ್ಚುವ ಸಾಮರ್ಥ್ಯ, ನಷ್ಟಗಳು ಉಂಟಾಗಿತ್ತಿರುವ ಕ್ಷೇತ್ರಗಳನ್ನು ಗುರುತಿಸುವುದು, ತಾಂತ್ರಿಕ ನಷ್ಟಗಳನ್ನು ಕಡಿಮೆ ಮಾಡುವುದು ಹಾಗೂ ವಿದ್ಯುತ್ ಸ್ಥಗಿತಗಳನ್ನು ಕನಿಷ್ಠ ಮಟ್ಟಕ್ಕೆ ತರುವುದು, ವಿದ್ಯುತ್ ಕಳ್ಳತನವನ್ನು ಕಡಿಮೆಗೊಳಿಸುವುದು ಹಾಗೂ ವಿದ್ಯುತ್ ಕಳ್ಳತನವನ್ನು ಕಡಿಮೆಗೊಳಿಸುವ ಸಲುವಾಗಿ ಅತ್ಯುನ್ನತ ಮಟ್ಟದ ವಿದ್ಯುತ್ ಹೊರೆಯನ್ನು ಹಾಗೂ ಇಳಿಮುಖಗೊಳಿಸಲು ಸಾರ್ವಜನಿಕ ಭಾಗಿತ್ವವನ್ನು ವೃದ್ಧಿಸುವುದು ಇತ್ಯಾದಿ ಗುರಿಯಾಗಿಸಿಕೊಳ್ಳಲಾಗಿರುವ ಪ್ರಯೋಜನಗಳನ್ನು ಸಾಧಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ರೀತಿಯಲ್ಲಿ ಇಂತಹ ಗುರಿಯಾಗಿಸಿಕೊಳ್ಳಲ್ಪಟ್ಟಿರುವ ಕಾರ್ಯಚಟುವಟಿಕೆಗಳಿಗೆ ಪರಸ್ಪರ ತಿಳಿವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಕಾಲಮಿತಿಯನ್ನು ಅನುಸರಿಸುವ ಅಗತ್ಯತೆಯೂ ಇತ್ತು.

ಕಾರ್ಯಾಚರಣೆಯ ಸುಧಾರಣೆಗಳ ಫಲಿತಾಂಶಗಳನ್ನು ಪರಸ್ಪರ ತಿಳಿವಳಿಕೆ ಪತ್ರದಲ್ಲಿ ಸೂಚಿಸಿರುವಂತೆ ನಷ್ಟ ತಗ್ಗಿಸುವಿಕೆ ವಿಕ್ಷೇಪಪಥದ ಅನುಸಾರ 2018–19ರಲ್ಲಿ ಎಟಿ ಅಂಡ್ ಸಿ ನಷ್ಟವನ್ನು ಶೇಕಡಾ 14.2ಕ್ಕೆ ಇಳಿಸುವುದು, ಸರಬರಾಜಿನ ಸರಾಸರಿ ವೆಚ್ಚ ಹಾಗೂ ಸರಾಸರಿ ವರಮಾನದ ನಡುವಿನ ಅಂತರವನ್ನು 2018–19ರ ವೇಳೆಗೆ ತೊಡೆದುಹಾಕುವುದು, ಇವೇ ಮುಂತಾದ ಸೂಚಕಗಳ ಮೂಲಕ ಅಳೆಯಬೇಕಿತ್ತು.

***ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ (ಯುಡಿಎವೈ) ಕಾರ್ಯಗತಗೊಳಿಸುವಿಕೆ***

**1.12.2**. ಭಾಗವಹಿಸುವ ರಾಜ್ಯಗಳು ಡಿಸ್ಕಾಂಗಳ ಸಾಲ/ಋಣಗಳ ಶೇಕಡಾ 75ರಷ್ಟನ್ನು 30 ಸೆಪ್ಟಂಬರ್ 2018ರ ವೇಳೆಗೆ ವಹಿಸಿಕೊಳ್ಳುವ ಅಗತ್ಯತೆಯಿತ್ತು, ಅಂದರೆ 2015–16ರಲ್ಲಿ ಶೇಕಡಾ 50 ಹಾಗೂ 2016–17ರಲ್ಲಿ ಶೇಕಡಾ 25.

ಕರ್ನಾಟಕ ಸರ್ಕಾರವು ಡಿಸ್ಕಾಂಗಳ ಯಾವುದೇ ಸಾಲ/ಋಣವನ್ನೂ ವಹಿಸಿಕೊಂಡಿರುವುದಿಲ್ಲ, ಆದರೆ ಕಾರ್ಯಾಚರಣೆಯ ಪರಿಮಿತಿಗಳನ್ನು ಕಾರ್ಯಗತಗೊಳಿಸುವುದನ್ನು ಕೈಗೆತ್ತಿಕೊಂಡಿರುವುದು. ರಾಜ್ಯದ ಐದು ಡಿಸ್ಕಾಂಗಳಿಗೆ ಸಂಬಂಧಿಸಿದಂತೆ ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ[33] ಅಡಿಯಲ್ಲಿ ವಿವಿಧ ಕಾರ್ಯಾಚರಣೆಗಳ ಪರಿಮಿತಿಗಳಿಗೆ ಸಾಧನೆಗಳು ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಗುರಿಗಳು ಈ ಕೆಳಗಿನಂತಿದ್ದವು:

---

[33] ಭಾರತ ಸರ್ಕಾರದ ವಿದ್ಯುತ್ ಮಂತ್ರಾಲಯದ ಜಾಲತಾಣದಲ್ಲಿ ಪ್ರಕಟಿಸಿರುವ ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ ಅಡಿಯಲ್ಲಿನ ರಾಜ್ಯ ಆರೋಗ್ಯ ಕಾರ್ಡಿನ ಅನುಸಾರ.

**ಕೋಷ್ಟಕ ಸಂಖ್ಯೆ 1.16: 30 ಸೆಪ್ಟೆಂಬರ್ 2020ರವರೆಗೆ ಕಾರ್ಯಾಚರಣೆಗಳ ಕಾರ್ಯನಿರ್ವಹಣೆಯ ಪರಿಮಿತಿವಾರು ಸಾಧನೆಗಳು ಹಾಗೂ ಅವುಗಳಿಗೆ ಪರಸ್ಪರ ಅಭಿಮುಖವಾಗಿ ಗುರಿಗಳು**

| ಕ್ರ. ಸಂ. | ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ ಪರಿಮಿತಿಗಳು | ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ ಅಡಿಯಲ್ಲಿ ಗುರಿ | ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ ಅಡಿಯಲ್ಲಿ ಪ್ರಗತಿ | ಸಾಧನೆ (ಶೇಕಡಾವಾರು) |
|---|---|---|---|---|
| 1 | ಫೀಡರುಗಳಿಗೆ ಮೀಟರು ಅಳವಡಿಕೆ (ಸಂಖ್ಯೆಗಳು) | 179 | 563 | 314.53 |
| 2 | ವಿತರಣಾ ಟ್ರಾನ್ಸ್‌ಫಾರ್ಮರುಗಳಲ್ಲಿ ಮೀಟರುಗಳನ್ನು ಅಳವಡಿಸುವುದು (ಸಂಖ್ಯೆಗಳು) | | | |
| | ಎ. ನಗರ | 11,525 | 19,252 | 167.05 |
| | ಬಿ. ಗ್ರಾಮೀಣ | 40,350 | 67,459 | 167.18 |
| 3 | ಫೀಡರು ವಿಂಗಡಣೆ (ಸಂಖ್ಯೆಗಳು) | 1,124 | 1,312 | 116.73 |
| 4 | ಗ್ರಾಮೀಣ ಫೀಡರು ಲೆಕ್ಕಪರಿಶೋಧನೆ (ಸಂಖ್ಯೆಗಳು) | 157 | 4,534 | 2,887.90 |
| 5 | ವಿದ್ಯುತ್ ಸಂಪರ್ಕ ನೀಡಿರದ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಿಕೆ (ಸಂಖ್ಯೆಗಳು ಲಕ್ಷದಲ್ಲಿ) | 5.42 | 7.95 | 146.68 |
| 6 | ಸ್ಮಾರ್ಟ್ ಮೀಟರುಗಳನ್ನು ಅಳವಡಿಸುವಿಕೆ (ಸಂಖ್ಯೆಗಳಲ್ಲಿ) | 43 | 2,541 | 5,909.30 |
| 7 | ಎಲ್‌ಇಡಿ ಉಜ್ವಲ ವಿತರಣೆ (ಸಂಖ್ಯೆಗಳು ಲಕ್ಷದಲ್ಲಿ) | 135.08 | 180.68 | 133.76 |
| 8 | ಎಟಿ ಅಂಡ್ ಸಿ ನಷ್ಟಗಳು (ಶೇಕಡಾವಾರು) | 14.20* | 26.21 | - |
| 9 | ಎಸಿಎಸ್–ಎಆರ್‌ಆರ್ ಅಂತರ (₹ ಯೂನಿಟ್ ಒಂದಕ್ಕೆ) | ಅಂತರವಿಲ್ಲ* | 0.01 | - |
| 10 | ಸಹಾಯಾನುಧಾನವೂ ಸೇರಿದಂತೆ ನಿವ್ವಳ ಆದಾಯ ಅಥವಾ ಲಾಭ/ನಷ್ಟ (₹ ಕೋಟಿಯಲ್ಲಿ) | 1,059.04 | 1,429.01 | - |

*ರಾಜ್ಯ ಸರ್ಕಾರವು ಮಾಡಿಕೊಂಡಿರುವ ಪರಸ್ಪರ ತಿಳುವಳಿಕೆ ಪತ್ರದ ಅನುಸಾರ

ಮೇಲಿನ ಕೋಷ್ಟಕದಿಂದ ಕಂಡುಬಂದಂತೆ, ರಾಜ್ಯದ ಸಾಧನೆಯು, ಕ್ರ. ಸಂ. 8 ಮತ್ತು 9ರಲ್ಲಿ ನಮೂದಿಸಿದ ಪರಿಮಿತಿಯನ್ನು ಹೊರತುಪಡಿಸಿ, ಉಜ್ವಲ ಡಿಸ್ಕಾಂ ಭರವಸೆ ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಎಲ್ಲಾ ಪರಿಮಿತಿಗಳನ್ನೂ ಮೀರಿತ್ತು,

## ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಮೇಲಿನ ಟೀಕೆಟಿಪ್ಪಣೆಗಳು

**1.13.** ವಿದ್ಯುತ್ ವಲಯಕ್ಕೆ ಸಂಬಂಧಿತ 10 ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪರಿಶೋಧನೆಗೆ ಒಳಪಟ್ಟಂತಹ 11[34] ಲೆಕ್ಕಪತ್ರಗಳನ್ನು ಮಹಾಲೇಖಾಪಾಲರಿಗೆ 1 ಅಕ್ಟೋಬರ್ 2018 ಹಾಗೂ 30 ಸೆಪ್ಟಂಬರ್ 2019ರ ನಡುವೆ ಕಳುಹಿಸಿದವು. ಈ ಎಲ್ಲಾ 11 ಲೆಕ್ಕಪತ್ರಗಳು (10 ಕಂಪನಿಗಳ) ಪೂರಕ ಲೆಕ್ಕಪರಿಶೋಧನೆಗೆ ಆಯ್ಕೆಯಾಗಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರ (ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೇಮಕ ಮಾಡಲ್ಪಟ್ಟಿದ್ದ) ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪೂರಕ ಲೆಕ್ಕಪರಿಶೋಧನೆಗಳು ಲೆಕ್ಕಪತ್ರಗಳ ನಿರ್ವಹಣೆಯ ಗುಣಮಟ್ಟವು ಸುಧಾರಣೆಗೊಳ್ಳುವ ಅಗತ್ಯತೆಯಿರುತ್ತದೆ ಎಂಬುದನ್ನು ಸೂಚಿಸುತ್ತಿದ್ದವು. ಶಾಸನಬದ್ಧ ಲೆಕ್ಕಪರಿಶೋಧಕರುಗಳು ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳ ಒಟ್ಟಾರೆ ಹಣಕಾಸಿನ ಮೌಲ್ಯದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

[34] ಕೆಆರ್‌ಇಡಿಎಲ್ ಎರಡು ಲೆಕ್ಕಪತ್ರಗಳನ್ನು ಅಂತಿಮಗೊಳಿಸಿತು.

**ಕೋಷ್ಟಕ ಸಂಖ್ಯೆ 1.17: ಕಾರ್ಯನಿರತ ಕಂಪನಿಗಳ ಮೇಲೆ ಲೆಕ್ಕಪರಿಶೋಧನೆಯ ಟೀಕೆಟಿಪ್ಪಣಿಗಳ ಪ್ರಭಾವ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016-17 | | 2017-18 | | 2018-19 | |
|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಲಾಭದಲ್ಲಿ ಇಳಿಕೆ (ಲೆಕ್ಕಪತ್ರಗಳು) | 1 | 889.96 | 5 | 830.85 | 2 | 3,181.38 |
| 2 | ಲಾಭದಲ್ಲಿ ಹೆಚ್ಚಳ (ಲೆಕ್ಕಪತ್ರಗಳು) | 1 | 5.58 | 1 | 6.01 | – | – |
| 3 | ನಷ್ಟದಲ್ಲಿ ಇಳಿಕೆ (ಲೆಕ್ಕಪತ್ರಗಳು) | – | – | – | – | – | – |
| 4 | ನಷ್ಟದಲ್ಲಿ ಹೆಚ್ಚಳ (ಲೆಕ್ಕಪತ್ರಗಳು) | 1 | 577.39 | 4 | 3,654.76 | 3 | 630.07 |
| 5 | ವಿಷಯಕ ವಾಸ್ತವಾಂಶಗಳನ್ನು ಬಹಿರಂಗ ಪಡಿಸದಿದ್ದುದು (ದೃಷ್ಟಾಂತಗಳು) | 4 | – | 5 | – | 7 | – |
| 6 | ವರ್ಗೀಕರಣದಲ್ಲಿನ ತಪ್ಪುಗಳು/ದೋಷಗಳು (ದೃಷ್ಟಾಂತಗಳು) | 1 | – | – | – | 1 | – |

2018–19ರಲ್ಲಿ, ಶಾಸನಬದ್ಧ ಲೆಕ್ಕಪರಿಶೋಧಕರುಗಳು ಎರಡು ಲೆಕ್ಕಪತ್ರಗಳ ಮೇಲೆ ಷರತ್ತುರಹಿತ ವರದಿಗಳನ್ನು ಹಾಗೂ ಒಂಭತ್ತು ಲೆಕ್ಕಪತ್ರಗಳ ಮೇಲೆ ಶರತ್ತುಬದ್ಧ ವರದಿಗಳನ್ನು ನೀಡಿದ್ದರು. ಪ್ರಸಕ್ತ ಸಾಲಿನಲ್ಲಿ ಅನುಸರಿಸದಿರುವ 36 ದೃಷ್ಟಾಂತಗಳು ಇದ್ದವಾದ್ದರಿಂದ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸುತ್ತಿದ್ದುದು ಬಹಳ ನಿಕೃಷ್ಟ ಮಟ್ಟದಲ್ಲಿತ್ತು.

## ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

***ಸಾಧನಾ ಲೆಕ್ಕಪರಿಶೋಧನೆಗಳು ಹಾಗೂ ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳು***

**1.14.** ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಒಂದು ಸಾಧನಾ ಲೆಕ್ಕಪರಿಶೋಧನೆ ಹಾಗೂ ಎರಡು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆ (ವಿಷಯಾಧಾರಿತ) ಗಳಿಗೆ ಉತ್ತರ ಒದಗಿಸುವಂತೆ ಕೋರಿ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ನೀಡಲಾಗಿತ್ತು. ಒಂದು ಸಾಧನಾ ಲೆಕ್ಕಪರಿಶೋಧನೆ ಮತ್ತು ಎರಡು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಯಿತು ಹಾಗೂ ಸರ್ಕಾರದ ಅಭಿಪ್ರಾಯಗಳನ್ನು ವರದಿಯಲ್ಲಿ ಸೂಕ್ತವಾಗಿ ಸೇರಿಸಲಾಯಿತು.

## ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು

***ಬಾಕಿಯಿರುವ ಉತ್ತರಗಳು***

**1.15.** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳು ಲೆಕ್ಕಪರಿಶೋಧನಾ ಪರಿಶೀಲನೆಯ ಪ್ರಕ್ರಿಯೆಯು ಮುಕ್ತಾಯಗೊಳ್ಳುವುದನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಅವುಗಳು ಕಾರ್ಯಾಂಗದ ಸೂಕ್ತ ಮತ್ತು ಸಮಯೋಚಿತ ಪ್ರತಿಕ್ರಿಯೆಯನ್ನು ಹೊರಸೆಳೆಯುವುದು ಅತ್ಯಗತ್ಯವಾಗಿರುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವಂತಹ ಕಂಡಿಕೆಗಳು ಮತ್ತು ಸಾಧನಾ ಲೆಕ್ಕಪರಿಶೋಧನೆಗಳಿಗೆ, ಅವುಗಳನ್ನು ಶಾಸನ ಸಭೆಯ ಮುಂದೆ ಮಂಡಿಸಲಾದ ದಿನಾಂಕದಿಂದ ಮೂರು ತಿಂಗಳುಗಳ ಒಳಗಿನ ಅವಧಿಯಲ್ಲಿ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯಿಂದ ಯಾವುದೇ ಪ್ರಶ್ನಾವಳಿಗಳಿಗೂ ನಿರೀಕ್ಷಿಸದೆಯೇ ಉತ್ತರಗಳನ್ನು ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿತ್ತು (ಜನವರಿ 1974). ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗೆ ಕರ್ನಾಟಕ ಸರ್ಕಾರದಿಂದ ಉತ್ತರಗಳ ಸ್ವೀಕೃತಿಯ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.18: 30 ಸೆಪ್ಟಂಬರ್ 2019ರಲ್ಲಿದ್ದಂತೆ ಉತ್ತರಗಳು ಸ್ವೀಕೃತಗೊಳ್ಳದಿರುವುದು**

| ಕ್ರಮ ಸಂಖ್ಯೆ | ಲೆಕ್ಕ ಪರಿಶೋಧನಾ ವರದಿಯ ಸಾಲು (ಸಾರ್ವಜನಿಕ ವಲಯ ಉದ್ದಿಮೆಗಳು) | ರಾಜ್ಯ ಶಾಸನ ಸಭೆಯ ಮುಂದೆ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಿದ ದಿನಾಂಕ | ಲೆಕ್ಕಪರಿಶೋಧನಾ ವರದಿಯಲ್ಲಿ ವಿದ್ಯುತ್ ವಲಯಕ್ಕೆ ಸಂಬಂಧಿತ ಒಟ್ಟು ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | | ಉತ್ತರಗಳನ್ನು ಸ್ವೀಕರಿಸದಿರುವ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | |
|---|---|---|---|---|---|---|
| | | | ಸಾಧನಾ ಲೆಕ್ಕಪರಿ ಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2015–16 | 23.03.2017 | 1 | 4 | 1 | 0 |
| 2 | 2016–17 | 22.02.2018 | 1 | 2 | 1 | 1 |
| | **ಒಟ್ಟು** | | **2** | **6** | **2** | **1** |

ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಎರಡು ಸಾಧನಾ ಲೆಕ್ಕಪರಿಶೋಧನೆಗಳು ಹಾಗೂ ಒಂದು ಕಂಡಿಕೆಗೆ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯು ಉತ್ತರಗಳನ್ನು ಸಲ್ಲಿಸಿರುವುದಿಲ್ಲ (ಸೆಪ್ಟೆಂಬರ್ 2019) ಎಂಬುದನ್ನು ಗಮನಿಸಬಹುದು.

***ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಿಂದ ಲೆಕ್ಕಪರಿಶೋಧನಾ ವರದಿಗಳ ಚರ್ಚೆ***

**1.16**. 30 ಸೆಪ್ಟಂಬರ್ 2019ರಲ್ಲಿದ್ದಂತೆ ವಿದ್ಯುತ್ ವಲಯಕ್ಕೆ ಸಂಬಂಧಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವಂತಹ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಲ್ಲಿ ಚರ್ಚಿಸಲಾಗಿರುವಂತಹ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ ಸಂಖ್ಯೆ 1.19: ಚರ್ಚಿಸಲಾಗಿರುವಂತಹ ಸಾಧನಾ ಲೆಕ್ಕಪರಿಶೋಧನೆಗಳು ಹಾಗೂ ಕಂಡಿಕೆಗಳ ಸ್ಥಿತಿಗತಿ**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯ ಅವಧಿ | ಸಾಧನಾ ಲೆಕ್ಕಪರಿಶೋಧನೆಗಳು/ಕಂಡಿಕೆಗಳ ಸಂಖ್ಯೆ | | | |
|---|---|---|---|---|---|
| | | ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟಗೊಂಡಿರುವುದು | | ಚರ್ಚಿಸಲಾಗಿರುವ ಕಂಡಿಕೆಗಳು | |
| | | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2010–11 | 1 | 2 | 0 | 2 |
| 2 | 2011–12 | 1 | 2 | 0 | 2 |
| 3 | 2013–14 | 1 | 7 | 1 | 6 |
| 4 | 2014–15 | 1 | 8 | 1 | 5 |
| 5 | 2015–16 | 1 | 4 | 0 | 0 |
| 6 | 2016–17 | 1 | 2 | 0 | 1 |
| | **ಒಟ್ಟು** | **6** | **25** | **2** | **16** |

**ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿಗಳ ಮೇಲೆ ಅನುಸರಣಾ ಕ್ರಮಗಳು**

**1.17**. 2014–15ರ ಅವಧಿಯ ಸಿಎಜಿ ವರದಿಯಲ್ಲಿ ಇದ್ದಂಥ ಒಂದು ಕಂಡಿಕೆಯ ಮೇಲೆ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಏಳು ಶಿಫಾರಸ್ಸುಗಳಿಗೆ (ರಾಜ್ಯ ಶಾಸಕಾಂಗದ ಮುಂದೆ ಜೂನ್ 2017ರಲ್ಲಿ ಮಂಡಿಸಿದ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ವರದಿ ಸಂಖ್ಯೆ.132) ಕರ್ನಾಟಕ ಸರ್ಕಾರದಿಂದ ತೆಗೆದುಕೊಳ್ಳಲಾದ ಕ್ರಮಗಳ ಬಗ್ಗೆ ಟಿಪ್ಪಣಿಗಳು (ಎಟಿಎನ್) ಇನ್ನೂ ಸ್ವೀಕೃತಗೊಂಡಿರುವುದಿಲ್ಲ (ಸೆಪ್ಟಂಬರ್ 2019).

**ಕಂಡಿಕೆಗಳು/ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿಯ ಶಿಫಾರಸುಗಳ ಮೇಲಿನ ಎಟಿಎನ್‌ಗಳಿಗೆ ನಿರ್ದಿಷ್ಟ ಕಾಲಮಿತಿಯೊಳಗೆ ಉತ್ತರಗಳನ್ನು ಕಳುಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**

## ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ

**1.18.** ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ಆದರೆ ಆ ವೇಳೆಗೆ ತತ್‌ಕ್ಷಣದಲ್ಲಿ ಇತ್ಯರ್ಥಪಡಿಸಲಾಗದ ಅಂಶಗಳನ್ನು ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳಿಗೆ ಹಾಗೂ ರಾಜ್ಯ ಸರ್ಕಾರದ ಇಂಧನ/ವಿದ್ಯುತ್ ಇಲಾಖೆಗೆ ಪರೀಕ್ಷಣಾ ವರದಿಗಳ ಮೂಲಕ ಗಮನಕ್ಕೆ ತರಲಾಗುವುದು. ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳು ಒಂದು ತಿಂಗಳಿನ ಒಳಗೆ ಇಂಧನ/ವಿದ್ಯುತ್ ಇಲಾಖೆಯ ಮುಖ್ಯಸ್ಥರ ಮೂಲಕ ಪರೀಕ್ಷಣಾ ವರದಿಗಳಿಗೆ ಉತ್ತರಗಳನ್ನು ಕಳುಹಿಸುವ ಅಗತ್ಯತೆಯಿರುತ್ತದೆ. 31 ಮಾರ್ಚ್ 2019ರಲ್ಲಿದ್ದಂತೆ ವಿದ್ಯುತ್ ವಲಯಕ್ಕೆ ಸಂಬಂಧಿತ 11 ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 238 ಪರೀಕ್ಷಣಾ ವರದಿಗಳಿಂದ 1,469 ಕಂಡಿಕೆಗಳು ಇದ್ದವು (***ಅನುಬಂಧ-6 – ಕ್ರಮ ಸಂಖ್ಯೆ 1***).

**(ಎ) ಸರ್ಕಾರವು ರಚಿಸಿರುವಂತಹ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಗಳ ಆಧಾರದ ಮೇರೆಗೆ ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ ನೀಡುವಲ್ಲಿ ವಿಫಲರಾಗುವಂತಹ ಅಧಿಕಾರಿಗಳ/ಸಿಬ್ಬಂದಿಗಳ ಪ್ರತಿಯಾಗಿ ಕ್ರಮ ಕೈಗೊಳ್ಳಲು ಹಾಗೂ (ಬಿ) ನಷ್ಟಗಳು/ಬಾಕಿಯಿರುವ ಮುಂಗಡಗಳು/ಮಿತಿಮೀರಿದಂತೆ ಮಾಡಲಾಗಿರುವ ಪಾವತಿಗಳನ್ನು ನಿರ್ದಿಷ್ಟ ಅವಧಿಯಲ್ಲಿ ವಸೂಲಾತಿ ಮಾಡಲು ಒಂದು ಕಾರ್ಯವಿಧಾನವು ಇರುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**